ಬೆಲೆ ರೂ.2.50
D.O.P - 15th of every month at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2015

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-15 ಸಂಚಿಕೆ-12 ಪುಟಗಳು-8 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಪಾದೆಬೆಟ್ಟಿನ ವಿಷ್ಣುಮೂರ್ತಿಯ ಸನ್ನಿಧಿಯಲ್ಲಿ ರಜತೋತ್ಸವ

ಸುಮಾರು ಎಂಟುನೂರು ವರ್ಷಗಳ ಇತಿಹಾಸ ಹೊಂದಿರುವ ಹಾಗೂ ಇತ್ತೀಚಿಗಷ್ಟೇ ಸಮಗ್ರವಾಗಿ ಜೀರ್ಣೋದ್ದಾರಗೊಂಡು ಬ್ರಹ್ಮಕಲಶೋತ್ಸವ ನೆರವೇರಿದ ಶ್ರೀ ಪಾದೆಬೆಟ್ಟು ವಿಷ್ಣುಮೂರ್ತಿ ದೇವಳದಲ್ಲಿ ವಿಶಿಷ್ಟವಾದ 'ರಜತೋತ್ಸವ' ಸಮಾರಂಭವು ಅದ್ದೂರಿಯಾಗಿ ತಾ.21-11-2015ರಂದು ನೆರವೇರಿತು. ಅಂದು ಭಕ್ತಾದಿಗಳು ದೇವರಿಗೆ ವಿವಿಧ ಬೆಳ್ಳಿಯ ಪರಿಕರಗಳನ್ನು ಚೆಂಡೆ, ವಾದ್ಯ ಘೋಷ ಹಾಗೂ ವೇದಘೋಷ ಸಮೇತ ವಾಗಿ, ಭಕ್ತಿಪೂರ್ವಕವಾಗಿ ಸಮರ್ಪಿಸಿದರು.

ಭಕ್ತಾದಿಗಳ ಇಷ್ಟಾರ್ಥಗಳನ್ನು ನೆರವೇರಿಸಿ ಕೊಡುವ ಕಾರಣೀಕವಿರುವ ಶ್ರೀ ವಿಷ್ಣು ಮೂರ್ತಿ ದೇವಳದಲ್ಲಿ ಉಪದೇವತೆಗಳಾಗಿರುವ ಶ್ರೀ ಮಹಾಗಣಪತಿ ದೇವರಿಗೆ ಪಡುಬಿದ್ರಿಯ ಶ್ರೀ ರವೀಂದ್ರ ಹೆಗ್ಡೆ ಹಾಗೂ ಕುಟುಂಬಸ್ಥರಿಂದ ಪೂರ್ಣ ರಜತ ಕವಚ ಸಮರ್ಪಣೆ, ಶ್ರೀ ಶಾಸ್ತಾವು ಸ್ವಾಮಿಗೆ ಪಡುಬಿದ್ರಿಯ ಶ್ರೀ ಎಂ.ಕೆ. ಮೋಹನರಾವ್, ಶ್ರೀ ಎಂ.ಕೆ ಸುಬ್ರಹ್ಮಣ್ಯ ರಾವ್ ಹಾಗೂ ಶ್ರೀ ದೇವರಾಯ ಶರ್ಮರಿಂದ ರಜತ ಕವಚದ ಸಮರ್ಪಣೆ ನೆರವೇರಿತು. ಮುಂಬಯಿಯ ಶ್ರೀ ಶ್ರೀಕಾಂತ







ಡಿ.ರಾವ್ ಹಾಗೂ ಭಾರತೀ ಡಿ.ರಾವ್ ದಂಪತಿಗಳು ಮಹಾಗಣಪತಿ ದೇವರಿಗೆ ನಿತ್ಯಾಲಂಕಾರ ರಜತ ಕವಚ ಹಾಗೂ ಬೆಳ್ಳಿಯ ಹರಿವಾಣವನ್ನು ಸಮರ್ಪಿಸಿದರು. ಕೋರೆಗಾಂ ಸುಬ್ರಾಯರ ಪುತ್ರಿ ಶ್ರೀಮತಿ ಲತಾ ಸೋಮಶೇಖರ್ ರಾವ್, ಪಡುಬಿದ್ರಿ ಇವರು ಬೆಳ್ಳಿಯ ಕಲಶವನ್ನು ಸಮರ್ಪಿಸಿದರು. ಶ್ರೀ ಮಹಾವಿಷ್ಣುವಿಗೆ ಬೆಳ್ಳಿಯ ಕವಚದ ಸಮರ್ಪಣೆ ಈ ಹಿಂದೆಯೇ ನಡೆದಿತ್ತು.

ಪೂಜಾವಿಧಿಗಳು ಹಾಗೂ ರಜತಕವಚ ಸಮರ್ಪಣಾವಿಧಿಗಳು ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ನೆರವೇರಿತು. ಪುರೋಹಿತರಾದ ಶ್ರೀ ನಾಗಭೂಷಣ ಶಾಸ್ತ್ರಿ, ಶ್ರೀ ಕೃಷ್ಣರಾಜ ಭಟ್ , ಶ್ರೀ ಅರವಿಂದ ಹಾಗೂ ಶ್ರೀ ಪ್ರತಾಪ ರವರು ಸಹಕರಿಸಿದರು. ರಜತಕವಚಗಳಿಂದ ಅಲಂಕೃತಗೊಂಡ ದೇವರುಗಳಿಗೆ ಮಹಾಪೂಜೆ ಹಾಗೂ ಮಂಗಳಾರತಿಯಾದ ನಂತರ ತೀರ್ಥಪ್ರಸಾದ ವಿತರಣೆ ಹಾಗೂ ಅನ್ನ ಸಂತರ್ಪಣೆ ನೆರವೇರಿತು. ದೇವಸ್ಥಾನದ ಆಡಳಿತಮಂಡಳಿ ಹಾಗೂ ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಇವರು ಕಾರ್ಯಕ್ರಮದ ರೂವಾರಿಗಳಾಗಿದ್ದರು. ಆಡಳಿತ ಮೊಕ್ತೇಸರರಾದ ಶ್ರೀ ಬಿ.ಜಯರಾಮ ರಾವ್ ಹಾಗೂ ಪಡುಬಿದ್ರಿ ಶ್ರೀ ಎಂ.ಕೆ ದಿವಾಕರರಾಯರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ್ದರು. ನೂರಾರು ಗ್ರಾಮಸ್ಥರು ಸಮಾಜ ಭಾಂಧವರು ಹಾಗೂ ವಿವಿಧ ಸಂಘಗಳ ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು .

**ಅರ್ಚಕರ ನಿವಾಸ**

ಶ್ರೀ ಕ್ಷೇತ್ರದಲ್ಲಿ ಅರ್ಚಕರ ವಾಸಕ್ಕಾಗಿ ದೇವಸ್ಥಾನದ ವತಿಯಿಂದ ಎಂಟು ಲಕ್ಷ ರೂ ವೆಚ್ಚದಲ್ಲಿ ನಿವಾಸವನ್ನು ಕಟ್ಟಲಾಗಿದ್ದು ಆ ಪ್ರಯುಕ್ತ ತಾ.20-11-2015ರ ರಾತ್ರಿ ವಾಸ್ತು ಪೂಜೆ, ಹೋಮಬಲಿ, ಸುದರ್ಶನ ಹೋಮ, ನವಗ್ರಹ ಹೋಮಗಳನ್ನು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಕಟ್ಟಡ ನಿರ್ಮಾಣಕ್ಕೆ ಪಾದೆಬೆಟ್ಟು ಶ್ರೀ ಅನಂತ ರಾವ್ ಸಹೋದರರು ಹಾಗೂ ಅವರ ಗೆಳೆಯರ ದೇಣಿಗೆ 1,50,000/- ಸೇರಿದಂತೆ ಉದಾರ ದಾನವಿತ್ತ ಎಲ್ಲಾ ಸಮಾಜಭಾಂಧವರಿಗೆ, ಭಕ್ತರಿಗೆ, ಸಂಘ ಸಂಸ್ಥೆಗಳಿಗೆ ದೇವಸ್ಥಾನದ ಆಡಳಿತ ಮಂಡಲಿ ಕೃತಜ್ಞತೆ ವ್ಯಕ್ತಪಡಿಸಿದೆ.

ವರದಿ : **ಬಿ. ಸುಧಾಕರ ರಾವ್**



## ಶ್ರೀಕ್ಷೇತ್ರ ಉದಯಾದ್ರಿ
## ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ



ಪಡುಬಿದ್ರಿ, ಉಡುಪಿ ಜಿಲ್ಲೆ-574111.

ಭಗವದ್ಭಕ್ತರೇ,

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ
ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು
**ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರ ಪರಮಾನುಗ್ರಹದೊಂದಿಗೆ**
ಸ್ವಸ್ತಿ! ಶ್ರೀ ಮನ್ಮಥ ನಾಮ ಸಂವತ್ಸರದ ಧನರ್ಮಾಸ ದಿನ ೨೪ ಸಲುವ ಮಾರ್ಗಶಿರ ಬ। ೩೦
**ದಿನಾಂಕ 9-1-2016ನೇ ಶನಿವಾರ**

### ವರ್ಷಾವಧಿ ಉತ್ಸವವು (ಎಳ್ಳಮಾಸ್ಯೆ ಜಾತ್ರೆ)

ನೆರವೇರಲಿರುವುದು. ಈ ಪ್ರಯುಕ್ತ ಭಕ್ತಾಭಿಮಾನಿಗಳಾದ ತಾವೆಲ್ಲರೂ ಈ ದೇವತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ತನು ಮನ ಧನಗಳೊಂದಿಗೆ ಸಹಕರಿಸಿ, ಗಂಧ ಪ್ರಸಾದವನ್ನು ಸ್ವೀಕರಿಸಿ, ಭಗವತ್ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಅರ್ಚಕರು** **ವ್ಯವಸ್ಥಾಪನಾ ಸಮಿತಿ**

**: ಕಾರ್ಯಕ್ರಮಗಳು :**

ತಾ.25-12-2015ರಿಂದ 8-1-2016ರ ತನಕ ರಾತ್ರಿ 7-30ಕ್ಕೆ ಶ್ರೀ ಬಾಲಗಣಪತಿ ದೇವರಿಗೆ **ರಂಗಪೂಜೆ.** ತಾ.09-01-2016ರಂದು ಬೆಳಗ್ಗೆ 8-00 ಗಂಟೆಗೆ **ಶ್ರೀ ಗಣಪತಿ ಅಥರ್ವಶೀರ್ಷ ಸಹಸ್ರ ಮೋದಕ ಯಾಗ.** ಮಧ್ಯಾಹ್ನ 1-00 ಗಂಟೆಗೆ **ಸಾರ್ವಜನಿಕ ಅನ್ನಸಂತರ್ಪಣೆ.** ರಾತ್ರಿ 7-00ರಿಂದ ಮಹಾರಂಗಪೂಜೆ, ಉತ್ಸವ ಬಲಿ, ಕಟ್ಟೆ ಪೂಜೆ, ಪ್ರಸಾದ ವಿತರಣೆ, ಮಂತ್ರಾಕ್ಷತೆ.

ವಿ.ಸೂ. :
1. ಸಹಸ್ರ ಮೋದಕ ಗಣಯಾಗದಲ್ಲಿ ರೂ.200/-ನ್ನು ಪಾವತಿಸಿ, ಭಾಗವಹಿಸಲು ಅವಕಾಶವಿದೆ.
2. ಭಕ್ತಾದಿಗಳು ಶ್ರೀ ದೇವಸ್ಥಾನಕ್ಕೆ ಹಸಿರುವಾಣಿ, ಹೊರೆಕಾಣಿಕೆ, ತುಪ್ಪ, ತೆಂಗಿನಕಾಯಿ, ಬಾಳೆಹಣ್ಣು, ಪುಷ್ಪ, ಇತ್ಯಾದಿಗಳನ್ನು ಸಮರ್ಪಿಸಬೇಕಾಗಿ ವಿನಂತಿ.
3. ಜಾತ್ರಾ ಸಮಯದಲ್ಲಿ ರೂ.500/-ನ್ನು ಪಾವತಿಸಿ, ರಂಗಪೂಜೆಯಲ್ಲಿ ಭಾಗವಹಿಸಲು ಅವಕಾಶವಿದೆ.
4. ವಸಂತ ಮಂಟಪದಲ್ಲಿ ಕಟ್ಟೆಪೂಜೆಯು ಜರಗಲಿರುವುದು. ಸೇವಾರ್ಥಿಗಳು ಮುಂಗಡವಾಗಿ ರೂ.200/-ನ್ನು ಪಾವತಿಸಿ ಪೂಜೆ ಸಲ್ಲಿಸಲು ಅವಕಾಶವಿದೆ.

**ಸಮಾಜ ಬಾಂಧವರು ಇದನ್ನೇ ವೈಯಕ್ತಿಕ ಆಮಂತ್ರಣವೆಂದು ಸ್ವೀಕರಿಸಿ ಆಗಮಿಸಬೇಕಾಗಿ ವಿನಂತಿ**

## ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಕುಂಜಿಬೆಟ್ಟು, ಉಡುಪಿ**

### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2016

**ತಾ.24-01-2016ನೇ ರವಿವಾರ ಉಡುಪಿಯ ಎಮ್.ಜಿ.ಎಮ್ ಕಾಲೇಜು ಗ್ರೌಂಡ್‌ನಲ್ಲಿ ನಡೆಯಲಿದೆ.**

**ಆಸಕ್ತ ತಂಡಗಳು 14-01-2016ರೊಳಗೆ ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ಕರಂಬಳ್ಳಿ ವಸಂತ್ ರಾವ್ (M : 9632291183), ಉಂಡಾರು ಕೃಷ್ಣರಾಜ ರಾವ್ (M : 9164581333), ಕೆ. ಸುರೇಶ್ ರಾವ್, ಕುತ್ಪಾಡಿ (M : 9036443884) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.**

**ವಿಶೇಷ ಸೂಚನೆ :**

1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ.
2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ.
3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.
4) ಅಲೆವೂರು ದಿ। ಭುಜಂಗ ರಾವ್ ಮತ್ತು ದಿ। ಶಾಂತಾ ದೇವಿ ಸ್ಮರಣಾರ್ಥ ಅವರ ಪುತ್ರ ಅಲೆವೂರು ಶ್ಯಾಮರಾವ್ ನೀಡುವ ನಗದು ಬಹುಮಾನಗಳನ್ನು ವಿಜೇತ ತಂಡಗಳಿಗೆ ವಿತರಿಸಲಾಗುವುದು.

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೂ ಕ್ರಿಕೆಟ್ ಪಂದ್ಯಾಟ**ವೂ ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 9-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ. ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

**- ಅಧ್ಯಕ್ಷರು ಮತ್ತು ಸಂಚಾಲಕರು,** ಯುವ ವೇದಿಕೆ ಮತ್ತು ಕ್ರೀಡಾ ವೇದಿಕೆ

**ತಾ.24-01-2016 ಬೆಳಿಗ್ಗೆ ಗಂಟೆ 9-00ರಿಂದ**
**ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀಶಾರದಾ ಮಂಟಪದಲ್ಲಿ**
**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.
**ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

**- ಅಧ್ಯಕ್ಷರು ಮತ್ತು ಸಂಚಾಲಕರು,** ಮಹಿಳಾ ವೇದಿಕೆ

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಡಿಸೆಂಬರ್ 17 ರಂದು ಶ್ರೀ ಸುಬ್ರಹ್ಮಣ್ಯ ಷಷ್ಠಿ. ನಮಗೆ ಅಂದರೆ ಸ್ಥಾನಿಕ ಬ್ರಾಹ್ಮಣರಿಗೆ ಇದು ವಿಶೇಷವಾದ ದಿನ. ಯಾಕೆಂದರೆ ಮೂಲತಃ ಸ್ಥಾನಿಕ ಬ್ರಾಹ್ಮಣರು ಶೈವರು, ಅದರಲ್ಲೂ ಸುಬ್ರಹ್ಮಣ್ಯನ ಆರಾಧಕರು. ಇದನ್ನು ತುಳುನಾಡಿನ ಇತಿಹಾಸವನ್ನು ಸಮಗ್ರವಾಗಿ ಅಧ್ಯಯನ ಮಾಡಿ ಸ್ಥಾನಿಕರ ಇತಿಹಾಸದ ಬಗ್ಗೆ ಬೆಳಕು ಚೆಲ್ಲಿ ಬರೆದಿರುವ ತುಳುನಾಡು ಗ್ರಂಥದ ಕರ್ತೃ ಶ್ರೀ ಪಾದೂರು ಗುರುರಾಜ ಭಟ್ಟರು ಈ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ತುಳುವಿನಲ್ಲಿ ಕುಕ್ಕೆ ಎಂದರೆ ಮಗು ಎಂದರ್ಥ. ಹಾಗಾಗಿ ಸುಬ್ರಹ್ಮಣ್ಯ ಕ್ಷೇತ್ರಗಳಿಗೆ ಕುಕ್ಕೆ ಎಂಬ ವಿಶೇಷಣ ಅಂಟಿಕೊಂಡಿದೆ. ತುಳುನಾಡಿನಲ್ಲಿ ಬಾಲೆ ಹಾಗೂ ಕುಮಾರ ಎಂಬ ಶಬ್ದಗಳು ಸುಬ್ರಹ್ಮಣ್ಯನನ್ನು ಸಂಭೋಧಿಸಿ ಉವಾಚಿಸಿದ್ದೆಂದೇ ಅರ್ಥೈಸಲ್ಪಡುತ್ತವೆ. ಹುಟ್ಟಿದ ಏಳೇ ದಿನಗಳಲ್ಲಿ ತಾರಕಾಸುರನನ್ನು ಕೊಂದು ದೇವದೇವತೆಗಳನ್ನು ರಕ್ಷಿಸಿದ ಕಾರಣಿಕದಿಂದಾಗಿ ಅವನು ರಕ್ಷಕನೆಂದೇ ಸಾರ್ವತ್ರಿಕವಾಗಿ ಜನಪದದಲ್ಲಿ ಪರಿಗಣಿಸಲ್ಪಡುತ್ತಾನೆ.

ಇತಿಹಾಸವನ್ನು ಅವಲೋಕಿಸಿದಾಗ ಪ್ರಸಿದ್ಧ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯವೂ ಸೇರಿದಂತೆ ಅನೇಕ ಸುಬ್ರಹ್ಮಣ್ಯ ದೇವಾಲಯಗಳು ಸ್ಥಾನಿಕರಿಂದ ಪೂಜಿಸಲ್ಪಡುತ್ತಿದ್ದರೂ ಈಗ ನಾಲ್ಕು ಪ್ರಮುಖ ಕ್ಷೇತ್ರಗಳು ನಮ್ಮಿಂದ ಆರಾಧಿಸ್ಪಡುತ್ತಿವೆ. ಅವೆಂದರೆ ಬೆಳ್ತಂಗಡಿಯ ಕೊಕ್ರಾಡಿ ಸುಬ್ರಹ್ಮಣ್ಯ ದೇವಸ್ಥಾನ, ಸುಳ್ಯದ ಕಾಂತಮಂಗಲ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆಯ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ ಹಾಗೂ ಬೆಂಗಳೂರಿನ ಕೋಡಿಗೆಹಳ್ಳಿ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ. ಇವುಗಳಲ್ಲಿ ಕೊಕ್ರಾಡಿ ಹಾಗು ಕಾಂತಮಂಗಲ ದೇವಸ್ಥಾನಗಳು ಎಂಟು ಶತಮಾನಕ್ಕೂ ಹಿಂದಿನವು. ಈ ಎಲ್ಲಾ ದೇವಸ್ಥಾನಗಳಲ್ಲಿ ಷಷ್ಠಿಯಂದು ವಿಶೇಷ ಉತ್ಸವ ವಿಜೃಂಭಣೆಯಿಂದ ನೆರವೇರುತ್ತದೆ.

ನಮ್ಮ ಸಮಾಜದ ಪ್ರಸಿದ್ಧ ಹರಿದಾಸರಾದ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯನವರು ತಮ್ಮ ಕೊನೆಗಾಲವನ್ನು ಪಾವಂಜೆ ಸುಬ್ರಹ್ಮಣ್ಯನ ಸನ್ನಿಧಿಯಲ್ಲಿ ಅವನ ಸ್ತುತಿಗೈಯ್ಯುತ್ತಾ ಕಳೆದಿದ್ದು ಅವರು ರಚಿಸಿರುವ ಸುಬ್ರಹ್ಮಣ್ಯನ ಸ್ತುತಿಯೊಂದನ್ನು ಮುಂದಿನ ಪುಟದಲ್ಲಿ ನೀಡಿದೆ. ಇವರು ರಚಿಸಿರುವ ಇನ್ನೂ ಅನೇಕ ಪದ್ಯಗಳು ಲಭ್ಯವಿವೆ. ಅವನ್ನು ಮುಂದೆ ಪ್ರಕಟಿಸಲಿದ್ದೇವೆ. ಷಷ್ಠಿಯ ಬಗ್ಗೆ ಬರೆದಿರುವ ಲೇಖನವೂ ಮುಂದಿನ ಪುಟಗಳಲ್ಲಿದೆ.

ಶ್ರೀ ಸುಬ್ರಹ್ಮಣ್ಯನು ನಮ್ಮೆಲ್ಲಾ ಸಮಾಜ ಬಾಂಧವರನ್ನು ಸದಾ ರಕ್ಷಿಸಿ ಹರಸಲಿ ಎಂದು ನಾವು ಈ ಸಂಧರ್ಭದಲ್ಲಿ ಪ್ರಾರ್ಥಿಸುತ್ತೇವೆ.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

–ಸಂಪಾದಕ ಮಂಡಳಿ

*ಶ್ರೀ ಶಾರದಾ ಪತ್ರಿಕೆಯ ಓದುಗರಿಗೆ*

**ಶ್ರೀ ಸುಬ್ರಹ್ಮಣ್ಯ ಷಷ್ಠಿ ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿಯ ಶುಭಾಶಯಗಳು**

ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-4

## ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ, ಕೋಡಿಂಬಾಡಿ, ಪುತ್ತೂರು ತಾಲೂಕು, ದ.ಕ



ಇಂದಿಗೆ ಸರಿಯಾಗಿ ನೂರು ವರ್ಷಗಳ ಹಿಂದೆ ಮಠಂತಬೆಟ್ಟು ಶ್ರೀ ಸುಬ್ರಾಯ ಶ್ಯಾನುಭಾಗರು ಬೆಳ್ಳಿಪ್ಪಾಡಿ ಕುಟುಂಬಸ್ಥರ ಸಹಾಯದೊಂದಿಗೆ, ಬ್ರಹ್ಮಶ್ರೀ ಕುರಿಯ ನಾರಾಯಣ ಆಚಾರ್ಯರ ಮೂಲಕ ಪ್ರತಿಷ್ಠಾಪಿಸಿದ ದೇವಾಲಯವಿದು. ಇದೀಗ ಸಮಗ್ರವಾಗಿ ಜೀರ್ಣೋದ್ಧಾರಗೊಂಡು ಬ್ರಹ್ಮಕಲಶೋತ್ಸವಕ್ಕಾಗಿ ಸಿದ್ಧಗೊಳ್ಳುತ್ತಿದೆ.

ಪುತ್ತೂರಿನಿಂದ ಉಪ್ಪಿನಂಗಡಿಗೆ ಹೋಗುವ ರಸ್ತೆಯಲ್ಲಿ ನಡುವೆ ಕೋಡಿಂಬಾಡಿ-ವಿನಾಯಕನಗರ ಎಂಬ ಗ್ರಾಮ ಸಿಗುತ್ತದೆ. ಇಲ್ಲಿ ರಸ್ತೆಯ ಎಡಭಾಗದಲ್ಲಿ ಹಾಕಿರುವ ದೇವಳದ ಸ್ವಾಗತಗೋಪುರದಿಂದ ಒಂದೂವರೆ ಕಿ.ಮೀ. ದೂರದಲ್ಲಿ ಈ ದೇವಳವಿದೆ.ಸಂಪೂರ್ಣವಾಗಿ ಶಿಲಾಮಯವಾದ ಈ ಗುಡಿಯಲ್ಲಿ ಸುಂದರ ಚತುರ್ಭುಜ ಶಿಲಾಮೂರ್ತಿಯಲ್ಲಿ ಶ್ರೀದೇವಿಯು ಆರಾಧಿಸಲ್ಪಡುತ್ತಿದ್ದಾಳೆ. ರಾಜಾಧಿರಾಜರಿಂದ ಪೂಜಿಸಲ್ಪಟ್ಟದ್ದರಿಂದ ರಾಜರಾಜೇಶ್ವರಿ ಎಂಬ ಹೆಸರು ಬಂದಿದೆ.

ದೇವಳದಲ್ಲಿ ನಿತ್ಯಪೂಜೆ, ದುರ್ಗಾಪೂಜೆ, ಹೂವಿನಪೂಜೆ, ರಂಗಪೂಜೆ, ಚಂಡಿಕಾ ಹೋಮ, ದುರ್ಗಾಹೋಮ ಇತ್ಯಾದಿ ಸೇವೆಗಳು ನಡೆಯುತ್ತವೆ. ಋಗುಪಾಕರ್ಮ, ಗಣೇಶ ಚತುರ್ಥಿ, ನವರಾತ್ರಿ, ದೀಪಾವಳಿ, ದೀಪೋತ್ಸವ, ಪತ್ತೆನಾಜೆ, ಪ್ರತಿಷ್ಠಾ ಮಹೋತ್ಸವಗಳು ಪ್ರತೀ ವರ್ಷ ವಿಜೃಂಭಣೆಯಿಂದ ನೆರವೇರುತ್ತವೆ.

ಸದ್ಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶ್ರೀ ಟಿ.ಅಣ್ಣಪ್ಪಯ್ಯನವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀ ಎಂ.ನಾಗೇಶ ಶರ್ಮರು ಪ್ರಧಾನ ಅರ್ಚಕರಾಗಿದ್ದಾರೆ. ಜೀರ್ಣೋದ್ಧಾರ ಸಮಿತಿ ಹಾಗೂ ಬ್ರಹ್ಮಕಲಶೋತ್ಸವ ಸಮಿತಿಗಳೂ ಕಾರ್ಯನಿರತವಾಗಿವೆ.

ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳ ಪರಮಾನುಗ್ರಹದಿಂದ ಕ್ಷೇತ್ರದ ತಂತ್ರಿಗಳಾದ ಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಸಮಗ್ರ ಜೀರ್ಣೋದ್ಧಾರ ಕಾರ್ಯ ನೆರವೇರಿದ್ದು ಜನವರಿ 2016ರ ದಿನಾಂಕ 19-01-2016ರಿಂದ 24-01-2016ರ ತನಕ ಹೆಬ್ಬೂರು ಕೋದಂಡಾಶ್ರಮದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳವರ ದಿವ್ಯ ಉಪಸ್ಥಿತಿಯಲ್ಲಿ ಬ್ರಹ್ಮಕಲಶೋತ್ಸವವು ನೆರವೇರಲಿದೆ. ಈ ಕಾರ್ಯಕ್ರಮಕ್ಕೆ ಎಲ್ಲಾ ಸಮಾಜಬಾಂಧವರಿಗೆ ದೇವಸ್ಥಾನದ ವತಿಯಿಂದ ಆದರದ ಸ್ವಾಗತವಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ಕ್ಷೇತ್ರದ ಅರ್ಚಕರಾದ ಶ್ರೀ ನಾಗೇಶ ಶರ್ಮರನ್ನು 9901247080ದಲ್ಲಿ ಸಂಪರ್ಕಿಸಬಹುದು.

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging



**ಶ್ರೀ ಎಲ್ಲೂರು ಉಮೇಶ ರಾವ್ ಹಾಗೂ ಶ್ರೀಮತಿ ಕಸ್ತೂರಿ**

**80ನೇ ಹುಟ್ಟುಹಬ್ಬದ ಶುಭಾಶಯಗಳು**

ಶ್ರೀಮತಿ ಶಾಂತಾ ಮತ್ತು ಶ್ರೀ ವೈ. ಜಗದೀಶ ರಾವ್
ಶ್ರೀಮತಿ ಶ್ರೀದೇವಿ ಮತ್ತು ಡಾ। ವೈ. ರವೀಂದ್ರನಾಥ ರಾವ್
ಶ್ರೀಮತಿ ಇಂದಿರಾ ಚಂದ್ರಶೇಖರ ರಾವ್, ಡಾ। ವೈ. ಸುದರ್ಶನ್ ರಾವ್
ಶ್ರೀಮತಿ ಶಾಂತಾ ಸರ್ವಜ್ಞಮೂರ್ತಿ, ಶ್ರೀ ವೈ. ಗಣೇಶ್ ರಾವ್
ಶ್ರೀಮತಿ ಸರೋಜಿನಿ ಮತ್ತು ಶ್ರೀ ವೈ. ಶಾಂತಿನಾಥ ರಾವ್
ಶ್ರೀಮತಿ ಜಯಶ್ರೀ ಮತ್ತು ಶ್ರೀ ವೈ. ಭುವನೇಂದ್ರ ರಾವ್
ಶ್ರೀಮತಿ ಶಾಂಭವಿ ವೆಂಕಟ್ರಾವ್ ಮತ್ತು ಶ್ರೀಮತಿ ನಿರ್ಮಲಾ ಕೃಷ್ಣ
ಸಹೋದರ-ಸಹೋದರಿಯರು, ಮಕ್ಕಳು-ಸೊಸೆಯಂದಿರು ಮತ್ತು ಮೊಮ್ಮಕ್ಕಳು

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
(ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | | |
|---|---|---|
| ವಾಹನ ಸಾಲ | : | 13% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 13% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 13% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 181 ದಿನಗಳು | : 6%, | 182 ದಿನಗಳಿಂದ 364 ದಿನಗಳು | : 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | : 10% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | : 10.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

*ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ*

| | | | |
|---|---|---|---|
| ಪ್ರಧಾನ ಕಛೇರಿ | – ☎ 2522408 | ಕುಕ್ಕಿಕಟ್ಟೆ ಶಾಖೆ | – ☎ 2592133 |
| ಪಡುಬಿದ್ರಿ ಶಾಖೆ | – ☎ 2556608 | ಕೋಟೇಶ್ವರ ಶಾಖೆ | – ☎ 9341854114 |

# ಸುಬ್ರಹ್ಮಣ್ಯ ಷಷ್ಠಿ

-ವೈ. ಮೋಹನ ರಾವ್

ದಕ್ಷಯಜ್ಞ ಯಕ್ಷಗಾನದ ಕಥೆ ಎಲ್ಲರಿಗೂ ಗೊತ್ತಿದೆ. ರಾಜ ದಕ್ಷನು ಭಗವಂತನಾದ ಶಿವನನ್ನು ಅವಮಾನಮಾಡಲೆಂದೇ ಯಜ್ಞವನ್ನು ಮಾಡಿದನು. ಆ ಯಾಗಕ್ಕೆ ಶಿವನಿಗೆ ಮತ್ತು ಶಿವನ ಪತ್ನಿ ದಾಕ್ಷಾಯಣಿ (ಸತಿ) ಇವರಿಗೆ ದಕ್ಷ ಆಮಂತ್ರಣ ನೀಡಿರಲಿಲ್ಲ. ಆದರೆ ದಾಕ್ಷಾಯಿಣಿ ತನ್ನ ತಂದೆ ದಕ್ಷನ ಯಾಗಕ್ಕೆ ಹೋಗಲೇಬೇಕೆಂದು ಹಠಮಾಡಿ ಶಿವನ ಒಪ್ಪಿಗೆಯಿಲ್ಲದೆ ಯಾಗಶಾಲೆಗೆ ಬರುತ್ತಾಳೆ. ಅಲ್ಲಿ ತನಗೆ ಮತ್ತು ತನ್ನ ಕಾಂತ ಶಿವನಿಗೆ ಮಾಡಿದ ಅಪಮಾನವನ್ನು ಕಂಡು ದಾಕ್ಷಾಯಣಿ ಯಜ್ಞ ಕುಂಡಕ್ಕೆ ಹಾರಿ ಪ್ರಾಣಾರ್ಪಣೆ ಮಾಡುತ್ತಾಳೆ. ತನ್ನ ಪತ್ನಿಯ ಬೆಂಗಾವಲಿಗೆಂದು ಕಳುಹಿಸಿದ ವೀರಭದ್ರ ದಕ್ಷನನ್ನು ಧ್ವಂಸ ಮಾಡುತ್ತಾನೆ. ಅವನ ಯಜ್ಞವನ್ನು ನಾಶ ಮಾಡುತ್ತಾನೆ.

ದಾಕ್ಷಾಯಣಿ ಪಾರ್ವತಿ ಅಥವಾ ಉಮಾ ಎಂದು ಮರುಹುಟ್ಟನ್ನು ಪಡೆಯುತ್ತಾಳೆ. ಹಿಮವಂತ ರಾಜನ ಮಗಳಾಗಿ ಜನಿಸುತ್ತಾಳೆ. ಇತ್ತ ತಾರಕಾಸುರನೆಂಬ ರಕ್ಕಸನ ಉಪಟಳ ಜಾಸ್ತಿಯಾಗುತ್ತದೆ. ಅವನೋ ಈಶ್ವರನ ಪುತ್ರನಿಂದ ಮರಣ ಎಂಬ ವರದಾನವನ್ನು ಪಡೆದಿರುತ್ತಾನೆ. ಈಶ್ವರ ನಿಂದಲೋ ಹೇಗೆ ಪುತ್ರ ಸಂತತಿ ಎಂದು ಅವನು ನಿರ್ಭಯನಾಗುತ್ತಾನೆ. ಇತ್ತ ಪಾರ್ವತಿ ಈಶ್ವರ ಸೇವೆಯಲ್ಲಿ ತೊಡಗುತ್ತಾಳೆ. ವರಿಸುವುದಾದರೆ ತಾನು ಶಿವನನ್ನು ಮಾತ್ರ ಎಂಬ ಅಚಲ ನಂಬಿಕೆಯಿಂದ ಇರುತ್ತಾಳೆ. ಈಶ್ವರನನ್ನು ತಪಸ್ಸಿನಿಂದ ಎಚ್ಚರಗೊಳಿಸಲು ಮನ್ಮಥನು ಸಿದ್ಧನಾಗುತ್ತಾನೆ. ಆಗ ಈಶ್ವರ ತನ್ನ ಮೂರನೇ ಕಣ್ಣನ್ನು ತೆರೆಯುತ್ತಾನೆ. ಆಗ ಮನ್ಮಥನು ಭಸ್ಮೀಭೂತನಾಗುತ್ತಾನೆ. ಈಶ್ವರ ತನ್ನ ವೇಷ ಮರೆಸಿ ಬ್ರಹ್ಮಚಾರಿಯ ರೂಪದಿಂದ ಪಾರ್ವತಿಯ ಬಳಿಗೆ ಬಂದು ಈಶ್ವರ ಪಾರ್ವತಿಯನ್ನು ಮದುವೆಯಾಗಲು ಸಾಧ್ಯವಿಲ್ಲ ಎಂದು ವಿಧವಿಧವಾಗಿ ಹೇಳುತ್ತಾನೆ. ಎಷ್ಟು ಹೇಳಿದರೂ ತಾನು ಈಶ್ವರನನ್ನೇ ಮದುವೆಯಾಗುವುದು ಎಂದು ನಿಶ್ಚಿತ ಅಭಿಪ್ರಾಯವನ್ನು ಪ್ರಕಟಿಸುತ್ತಾಳೆ. ಕೊನೆಗೆ ಈಶ್ವರ ಪಾರ್ವತಿಯವರ ಕಲ್ಯಾಣವು ಸಪ್ತಋಷಿಗಳ ಸಮ್ಮುಖದಲ್ಲಿ ನಡೆಯುತ್ತದೆ. ಪಾರ್ವತಿ ಗರ್ಭಧರಿಸಿದ ಸಂದರ್ಭದಲ್ಲಿ ಈಶ್ವರನ ರೇತಸ್ಸನ್ನು ಧರಿಸಲು ಕಷ್ಟಸಾಧ್ಯವಾಯಿತು. ಆ ರೇತಸ್ಸನ್ನು ಕೊಂಡೊಯ್ಯುವ ಜವಾಬ್ದಾರಿಯನ್ನು ಅಗ್ನಿ ದೇವತೆ ಪಡೆಯುತ್ತಾನೆ. ಆದರೆ ಅದನ್ನು ಕೊಂಡೊಯ್ಯುವಾಗ ಅದು ಮತ್ತಷ್ಟು ಉಜ್ವಲವಾಗುತ್ತ ತಾಪವನ್ನು ನೀಡುತ್ತದೆ. ಅದನ್ನು ತಡೆದುಕೊಳ್ಳಲು ಸಾಧ್ಯವಾಗದೇ ಅಗ್ನಿ ಗಂಗೆಯಲ್ಲಿ ಮುಳುಗಿಸುತ್ತಾನೆ. ಗಂಗೆ ಅದನ್ನು ಕಾಡಿನ ಬಳಿ ಸರವಣ ನದೀ ತೀರದಲ್ಲಿ ಹರಿಯಬಿಡುತ್ತಾಳೆ. ಪಾರ್ವತಿದೇವಿ ಆಗ ಅಲ್ಲಿಗೆ ಬಂದು ಆ ನೀರಿನ ಭಾಗವನ್ನು ತೆಗೆದುಕೊಳ್ಳುತ್ತಾಳೆ. ತನ್ನ ಗಂಡ ಶಿವನ ರೇತಸ್ಸನ್ನು ಅವಳು ಮಾತ್ರ ಉಪಯೋಗಿಸಲು ಸಾಧ್ಯವಾಗುವುದು, ಆಗ ಅಂತಿಮವಾಗಿ ಆರು ಮುಖಗಳುಳ್ಳ ಒಂದು ಸುಂದರ ಮಗುವಿನ ಜನನವಾಗುತ್ತದೆ. ಆ ಮಗವನ್ನು ನೋಡಿಕೊಳ್ಳಲು ಜವಾಬ್ದಾರಿ ಆರು ವನಿತೆಯರ ಪಾಲಿಗೆ ಬರುತ್ತದೆ (ಕೃತ್ತಿಕೆಯರು). ಆದ್ದರಿಂದ ಹೆಸರು ಕಾರ್ತಿಕೇಯ. 6 ದಿನಗಳಲ್ಲೇ ಬಹಳ ಸುಂದರ, ಬುದ್ಧಿವಂತ, ಶಕ್ತಿಯುತ ಮತ್ತು ಚುರುಕಾದ ತರುಣನಾಗಿ ಬೆಳೆಯುತ್ತಾನೆ. ಅವನು ಏಳನೇ ದಿನದಲ್ಲಿ ದೇವಸೇನಾಧಿಪತಿಯಾಗಿ ತಾರಕಾಸುರನ ವಧೆ ಮಾಡುತ್ತಾನೆ.

ಈ ಸುಂದರ ಮಗುವೇ ಸುಬ್ರಹ್ಮಣ್ಯ, ಕುಮಾರ, ಕುಮಾರಸ್ವಾಮಿ, (ಕುಮಾರ ಅಂದರೆ ಬ್ರಹ್ಮಚಾರಿ, ಸ್ವಾಮಿ ಅಂದರೆ ದೇವರು) ಸ್ಕಂದ, ಷಣ್ಮುಖ, ಮುರುಗನ್ (ತರುಣ) ಇತ್ಯಾದಿ ಹೆಸರುಗಳಿಂದ ಸುಬ್ರಹ್ಮಣ್ಯ ಪ್ರಸಿದ್ಧ . ಜ್ಞಾನ, ಶಕ್ತಿ, ಸಿದ್ಧಿ ಈ ಮೂರು ಸೇರಿ ಸುಬ್ರಹ್ಮಣ್ಯ. ಸುಬ್ರಹ್ಮಣ್ಯ ತಾಯಿಯ ಮಡಿಲಲ್ಲಿ ಕುಳಿತು ಬ್ರಹ್ಮ, ಪ್ರಣವ, ಓಂಕಾರ, ಕಲಿತನು. ತನ್ನ ಒಂದು ಅಂಶವನ್ನು ವಾಸುಕಿಯ ಪ್ರಾರ್ಥನೆಯ ಮೇರೆಗೆ ನೀಡಿದುದರಿಂದ ಅದು ಸುಬ್ರಹ್ಮಣ್ಯ ಷಷ್ಠಿ ಎಂದು ಕರೆಯಲ್ಪಡುತ್ತದೆ. ನಾಗಾರಾಧನೆ ಭಾರತೀಯ ಸಂಸ್ಕೃತಿಯಲ್ಲಿ ಅತೀ ಪುರಾತನ ಪೂಜಾ ವಿಧಾನವೂ ಹೌದು.

ನೀಲಿ ಬಣ್ಣದ ನವಿಲೇ ಸುಬ್ರಹ್ಮಣ್ಯನ ಪೀಠ ಅಥವಾ ವಾಹನ. ಉದ್ದನೆಯ ಈಟಿಯಂಥ ಆಯುಧವನ್ನು ಸುಬ್ರಹ್ಮಣ್ಯನ ಕೈಯಲ್ಲಿ ಕಾಣಬಹುದು. ಈಟಿಯಂತ ಆಯುಧ ಪಾರ್ವತಿಯಿಂದ ಸುಬ್ರಹ್ಮಣ್ಯನಿಗೆ ನೀಡಲ್ಪಟ್ಟಿತು. ಅಸುರರರನ್ನು ಕೊಲ್ಲಲು ಈ ಆಯುಧ.

ಸುಬ್ರಹ್ಮಣ್ಯ ನಮ್ಮ ಕುಲದೇವತೆ. ಮನೆಗಳಲ್ಲಿ ಮತ್ತು ದೇವಸ್ಥಾನಗಳಲ್ಲಿ ಸುಬ್ರಹ್ಮಣ್ಯ ಷಷ್ಠಿ ಆಚರಿಸಲ್ಪಡುತ್ತದೆ. ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದಲ್ಲಿ 15-12-2015 ರಿಂದ 17-12-2015ರ ವರೆಗೆ ಚಂಪಾ ಷಷ್ಠಿ ಮಹೋತ್ಸವ. ಚೌತಿ, ಪಂಚಮಿ ಮತ್ತು ಸುಬ್ರಹ್ಮಣ್ಯ ಷಷ್ಠಿಯನ್ನು ಚಂಪಾಷಷ್ಠಿ ಎನ್ನುತ್ತಾರೆ.

ಕರಾವಳಿ ಪ್ರದೇಶದಲ್ಲಿ ಅಲ್ಲಲ್ಲಿ ಷಷ್ಠಿಯನ್ನು ಆಚರಿಸುತ್ತಾರೆ. ಉಡುಪಿಯ ಶ್ರೀಕೃಷ್ಣಮಠದಲ್ಲಿರುವ ಸುಬ್ರಹ್ಮಣ್ಯ, ಕುಡುಪು, ಶ್ರೀ ಕ್ಷೇತ್ರ ಸುಬ್ರಹ್ಮಣ್ಯ, ಕಾಳಾವರ, ಉಡುಪಿಯ ಸಗ್ರಿ, ಮುಚ್ಚಿಲಕೋಡು, ಅರಿತೋಡು, ಮಾಂಗೋಡು ಮೊದಲಾದ ದೇವಸ್ಥಾನಗಳಲ್ಲಿ ಬಹಳ ವಿಜೃಂಭಣೆಯಿಂದ ಷಷ್ಠಿ ಆಚರಿಸಲ್ಪಡುತ್ತದೆ.

ಮುರುಗನ್ ತಮಿಳರ ಆರಾಧ್ಯ ದೇವರು ಅಲ್ಲಿ ಆರು ದಿನಗಳ ಉಪವಾಸ ಮತ್ತು ಪ್ರಾರ್ಥನೆ ನಡೆಯುತ್ತದೆ. ಸ್ಕಂದಷಷ್ಠಿ ಎಂದು ಬಹಳ ಪ್ರಸಿದ್ಧವಾಗಿದೆ. ಆ ದಿನದಲ್ಲೇ ಸ್ಕಂದನಿಗೆ ಈಟಿಯಂಥ ಆಯುಧವನ್ನು ಪಾರ್ವತಿದೇವಿ ನೀಡಿದ್ದು ಅದು ಅವಳ ಶಕ್ತಿ ಮತ್ತು ಸಾಮರ್ಥ್ಯವನ್ನು ಪ್ರತಿನಿಧಿಸುತ್ತದೆ.

ಉತ್ತರಕೇರಳ, ಕರ್ನಾಟಕ, ಆಂಧ್ರಪ್ರದೇಶದಲ್ಲಿ ಸುಬ್ರಹ್ಮಣ್ಯ ಮುಖ್ಯ ದೇವರು. ನಾಗಾರಾಧನೆಯಂತಹ ವೈಶಿಷ್ಟ್ಯವನ್ನು ಉತ್ತರ ಕನ್ನಡದಲ್ಲಿ ಕಾಣಬಹುದು.

ಮಲೇಷಿಯಾ, ಸಿಂಗಾಪುರ, ಶ್ರೀಲಂಕಾ, ಕೆನಡಾ ಮೊದಲಾದ ದೇಶಗಳಲ್ಲಿಯೂ ಸುಬ್ರಹ್ಮಣ್ಯ ಪೂಜಿಸಲ್ಪಡುತ್ತಾನೆ. ಕೌಲಾಲಂಪುರದಲ್ಲಿರುವ 'ಬಟುಕೇವ್ಸ್', ದೇವಮುರುಗನ ಬಹಳ ಪ್ರಸಿದ್ಧವಾದ ದೇವಾಲಯ.

**ಯಕ್ಷಗಾನ ಹಾಡೊಂದು ಹೀಗಿದೆ :**

**ಶ್ರೀ ಸುಬ್ರಹ್ಮಣ್ಯ ಸ್ತುತಿ**

**ಭಾಮಿನಿ-ರಾಗ-ಮಧ್ಯಮಾವತಿ**

*ತಾರಕನ ಕೊಲಲೆಂದು ಶಿವನ ಕುಮಾರ ಪಾರ್ವತಿಯಲ್ಲಿ ಜನಿಸಿಹ ।*
*ಮೂರುಲೋಕದ ಒಡೆಯ ಸುಬ್ರಹ್ಮಣ್ಯ ಸಲಹೆನ್ನ ॥*
*ಆರು ಮತ್ತೊಂದನೆಯ ದಿನದಲಿ ಘೋರದೈತ್ಯನ ಶಿರವನರಿದ ।*
*ಮಯೂರವಾಹನ ಕೊಡು ನಮಗೆ ಇಷ್ಟಾರ್ಥಸಂಪದವ ॥*

**ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯ ವಿರಚಿತ**

## ಸುಬ್ರಹ್ಮಣ್ಯ ಸ್ತೋತ್ರ

**ಜಯದೇವ ಜಯದೇವ ಜಯ ಸುಬ್ರಹ್ಮಣ್ಯ**
**ಆರತಿ ಮಾಡುವೆ ನಿನಗೆ ವರೇಣ್ಯ ॥ ಪಲ್ಲವಿ ॥**

**ಅರಳಿದಕಮಲಸನ್ನಿಭಶುಭಚರಣ- ।**
**ವರ ಪಂಚಾನನ ಪೋಲ್ವ ಕಟಿಕಾಂಚ್ಯಾಭರಣ ॥**
**ಉರುಶಕ್ತಿಕುಕ್ಕುಟಾಭಯವಜ್ರಹಸ್ತ ।**
**ಶರಣಾಗತಜನದುರಿತವಿಧ್ವಸ್ತ ॥ ೧ ॥**

**ಬಲಮುರಿಶಂಖದಂತಿಹ ಚೆಲ್ವ ಗ್ರೀವ ।**
**ಸುಲಲಿತಮಾಣಿಕ್ಯಹಾರದಿಂ ಪೊಳೆವ ॥**
**ನಲಿವ ಕರ್ಣಕುಂಡಲಗಳ ಶೋಭ ।**
**ಜ್ವಲಿತಕಿರೀಟಮಸ್ತಕಸೂರ್ಯಾಭ ॥ ೨ ॥**

**ಈ ಕ್ಷಿತಿಯೊಳಗೆ ಪಾವಂಜೇತಿ ನಾಮ ।**
**ಸುಕ್ಷೇತ್ರವಾಸ ಸುಜನಜನಪ್ರೇಮ ॥**
**ಲಕ್ಷ್ಮೀನಾರಾಯಣನ ಪ್ರೀತಿಯ ಪಾತ್ರ ।**
**ರಾಕ್ಷಸಾರಣ್ಯದಹನವೀತಿಹೋತ್ರ ॥ ೩ ॥**

# ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನಂ

**ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠಂ ಶೃಂಗೇರಿ.**

**ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ** (ರಾಜ್ಯಾದ್ಯಂತ ಇಪ್ಪತ್ತು ಲಕ್ಷ ಆವೃತ್ತಿಯೊಂದಿಗೆ ಪಾರಾಯಣ)



**ಶಂಕಾರೂಪೇಣ ಮಚ್ಚಿತ್ತಂ ಪಂಕೀಕೃತಮಭೂದ್ಯಯಾ ।**
**ಕಿಂಕರೀ ಯಸ್ಯ ಸಾ ಮಾಯಾ ಶಂಕರಾಚಾರ್ಯಮಾಶ್ರಯೇ ॥**

ಹನ್ನೆರಡು ಶತಮಾನಗಳ ಹಿಂದೆ ನಮ್ಮ ಭರತಖಂಡದಲ್ಲಿ ಅವೈದಿಕ ಮತಗಳು ಹೆಚ್ಚಾಗಿ ಸನಾತನ ವೈದಿಕ ಧರ್ಮವು ಬಹಳ ಹೀನಸ್ಥಿತಿಯನ್ನು ತಲುಪಿದಾಗ ಸಕಲ ದೇವತೆಗಳಿಂದ ಪ್ರಾರ್ಥಿತನಾದ ಕೈಲಾಸವಾಸಿಯಾದ ಪರಮೇಶ್ವರನು ಕೇರಳದ ಕಾಲಟೀ ಕ್ಷೇತ್ರದಲ್ಲಿ ಆರ್ಯಾಂಬಾ ಶಿವಗುರುಗಳೆಂಬ ಪುಣ್ಯದಂಪತಿಗಳಿಗೆ ಪುತ್ರನಾಗಿ ಶ್ರೀ ಶಂಕರ ಎಂಬ ನಾಮಧೇಯದಿಂದ ಅವತರಿಸಿ, ಭಾರತದ ಉದ್ದಗಲಕ್ಕೂ ಸಂಚರಿಸಿ, ಅವೈದಿಕ ಮತಗಳೆಲ್ಲವನ್ನೂ ಖಂಡಿಸಿ ವೈದಿಕ ಧರ್ಮವನ್ನು ಪುನರುದ್ಧರಿಸಿ, ಪ್ರಸ್ಥಾನತ್ರಯ ಭಾಷ್ಯಗಳಾದಿಯಾಗಿ ಅನೇಕ ಗ್ರಂಥಗಳನ್ನು ರಚಿಸಿ, ಔಪನಿಷದವಾದ ಅದ್ವೈತ ಸಿದ್ಧಾಂತವನ್ನು ಎಲ್ಲರಿಗೂ ಬೋಧಿಸಿ, ಸನಾತನ ಧರ್ಮವು ನಿರಂತರವಾಗಿ ಪ್ರಚಾರದಲ್ಲಿ ಇರಬೇಕೆಂಬ ಮಹೋದ್ದೇಶದಿಂದ ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿರತಕ್ಕ ವಿಷಯವು ಸಕಲ ಜಗದ್ವಿದಿತವೇ ಆಗಿದೆ.

ಭಗವತ್ಪಾದರಿಗೆ ಕೃತಜ್ಞತೆಯನ್ನು ತೋರುವ ದೃಷ್ಟಿಯಿಂದ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠಾಧಿಶ್ವರರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರು ಹಾಗೂ ಅವರ ಕರಕಮಲ ಸಂಜಾತರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಮಹಾಸಂರಕ್ಷಣೆಯಲ್ಲಿ ಶ್ರೀ ಮಠದ ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನವು ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆ. ಪ್ರಸುತ ಈ ಅಭಿಯಾನದಲ್ಲಿ ಉಭಯ ಜಗದ್ಗುರುಗಳ ಪರಮಾನುಗ್ರಹದೊಂದಿಗೆ 'ಶ್ರೀ ಶಂಕರಾ ಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ'ವೆಂಬ ಯೋಜನೆಯನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದೆ. ಪರಮ ಶಿವಾವತಾರರಾದ ಆದಿಶಂಕರರ ಅಷ್ಟೋತ್ತರ ಶತನಾಮಗಳನ್ನು ಇಪ್ಪತ್ತು ಲಕ್ಷ ಸಂಖ್ಯೆಯಲ್ಲಿ ಸಾಮೂಹಿಕವಾಗಿ ಪಾರಾಯಣ ಮಾಡುವುದು ಸಮಾಜಕ್ಕೆ ಅತ್ಯಂತ ಶ್ರೇಯಸ್ಕರವಾಗಿದೆ. ಈ ಯಜ್ಞದಲ್ಲಿ ಜಾತಿಮತ ಲಿಂಗ ವಯಸ್ಸು ಎಂಬ ಭೇದವಿಲ್ಲದೆ ಸಮಸ್ತರೂ ಪಾಲ್ಗೊಳ್ಳಬಹುದು.

**ಪಾರಾಯಣ ಸ್ವರೂಪ**

ಡಿಸೆಂಬರ್ 6, 2015ರ ಭಾನುವಾರದಿಂದ ಪ್ರಾರಂಭಗೊಂಡು ಮೇ 1, 2016ರ ಭಾನುವಾರದವರೆಗಿನ 5 ತಿಂಗಳ ಆವಧಿಯಲ್ಲಿ ಬರುವ 22 ಭಾನುವಾರಗಳಂದು ಪಾರಾಯಣ ಮಾಡುವುದು.

**ಪಾರಾಯಣವನ್ನು ಅನುಸರಿಸುವ ವಿಧಾನ**

- ಏಕಶ್ಲೋಕೀ ಸ್ತೋತ್ರವನ್ನು ಪಠಿಸುವುದರ ಮೂಲಕ ದೀಪಪ್ರಜ್ವಾಲನೆ
- ಗುರುವಂದನೆಯೊಂದಿಗೆ ಪ್ರಾರ್ಥನೆ.
- ಶಾರದಾ ಭುಜಂಗ ಪ್ರಯಾತಾಷ್ಟಕ ಸ್ತೋತ್ರದ ಪಠನ
- ಸಂಕಲ್ಪ
- ಶ್ರೀ ಶಂಕರಾಚಾರ್ಯ ಅಷ್ಟೋತರ ಶತನಾಮಗಳ ಪಾರಾಯಣ (5 ಸಲ ಪಾರಾಯಣ ಮಾಡುವುದು)
- ಮಂಗಳ ಪದ್ಯದೊಂದಿಗೆ ಮುಕ್ತಾಯ


**ಸೂಚನೆ :**

ಈ ಯಜ್ಞದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ. ಪಾರಾಯಣಕ್ಕೆ ಬೇಕಾಗುವ ಪುಸ್ತಕಗಳು ಹಾಗೂ ಸಿ.ಡಿಗಳು ರಾಜ್ಯಾದ್ಯಂತ ಪ್ರತಿಯೊಂದು ಜಿಲ್ಲಾ ಹಾಗೂ ತಾಲ್ಲೂಕು ಸಂಚಾಲಕರಲ್ಲಿ ದೊರೆಯುತ್ತವೆ.

ಶ್ರೀ ಶಾರದಾ ಮಂಟಪ ದೇವಸ್ಥಾನ ಉಡುಪಿಯಲ್ಲಿ ಡಿಸೆಂಬರ್ 6, 2015ರ ಭಾನುವಾರದಂದು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ಉಪಸ್ಥಿತಿಯಲ್ಲಿ 'ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ'ವು ಶ್ರೀಶಾರದಾ ದೇವಿಯ ಸಮ್ಮುಖದಲ್ಲಿ ಆರಂಭಗೊಂಡಿತು. ಪ್ರತೀ ವಾರದ ಆದಿತ್ಯವಾರದಂದು ಸಂಜೆ 5 ಗಂಟೆಗೆ ಪಾರಾಯಣವು ನೆರವೇರಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕೃತಾರ್ಥರಾಗಬೇಕೆಂದು ಕೋರಲಾಗಿದೆ.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

**ಫೋನ್ : 2556536 (R), 2555466 (O), Mobile : 9845149521**



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಕೆ. ಎಸ್. ರಾವ್ ಅವರ ಪ್ರಾಮಾಣಿಕ ಸಾಧನೆಗೆ ಸಂದ ಗೌರವ



ಸಂಸ್ಕೃತದಲ್ಲೊಂದು ಮಾತಿದೆ 'ಕೃಷಿತೋ ದುರ್ಭಿಕ್ಷಂ ನಾಸ್ತಿ' ಎಂದು. ಇಂದು ಅದೆಷ್ಟೋ ಕುಟುಂಬಗಳಲ್ಲಿ ಹಿರಿಯರಿಂದ ಬಳುವಳಿಯಾಗಿ ಬಂದ ಕೃಷಿ ಭೂಮಿ ಇದ್ದರೂ ಇಂದಿನ ಯುವ ಪೀಳಿಗೆಗೆ ಇರುವುದು ನಗರ ಪ್ರದೇಶಕ್ಕೋ, ವಿದೇಶಕ್ಕೋ ಹೋಗುವ ಯೋಚನೆ, ಊರಲ್ಲಿ ಕೃಷಿ ಕೆಲಸ ಮಾಡಿದರೆ ಗೌರವ ಕಮ್ಮಿ ಎನ್ನುವ ಋಣಾತ್ಮಕ ಭಾವನೆ. ಇದಕ್ಕೆ ಉತ್ತರವಾಗಿ ನಮ್ಮ ಮುಂದಿರುವವರು ಉಡುಪಿ ಜಿಲ್ಲೆಯ ಮಂದಾರ್ತಿ ಸಮೀಪದ ಹೆಗ್ಗುಂಜೆ ಗ್ರಾಮದ ಬಿ.ಕಾಂ. ಪದವೀಧರ ಕೆ. ಶಂಭುಶಂಕರ ರಾವ್. ಅಂದಿನ ದಿನಗಳಲ್ಲಿ ತನ್ನ ವಿದ್ಯಾರ್ಹತೆಗೆ ತಕ್ಕ ಉದ್ಯೋಗಾವಕಾಶ (ವೈಟ್ ಕಾಲರ್ ಜಾಬ್) ಇದ್ದರೂ ಅದರ ಕಡೆ ವಾಲದೆ 1980ರಲ್ಲಿ ಪಿತ್ರಾರ್ಜಿತ ಕೃಷಿ ಭೂಮಿಯಲ್ಲಿ ಮೊದಲಿಗೆ ಆರ್ಥಿಕ ಬೆಳೆಯಾಗಿ ಭತ್ತವನ್ನು ಆಯ್ಕೆ ಮಾಡಿಕೊಂಡು ನಂತರ ರೇಷ್ಮೆ, ತೆಂಗು, ಅಡಿಕೆ, ಗೇರು, ಉಪಬೆಳೆಯಾಗಿ ಕಾಳುಮೆಣಸು, ಕೊಕ್ಕೋ, ಅನನಾಸು, ಬಾಳೆ, ಜಾಯಿಕಾಯಿ, ಅಗರು ಮತ್ತು ದ್ವಿದಳ ಧಾನ್ಯಗಳನ್ನು ಹಂತ ಹಂತವಾಗಿ ಪ್ರಾರಂಭಿಸಿ ಕೃಷಿಯಲ್ಲಿ ಸಮಗ್ರ ಬೆಳೆ ಪದ್ಧತಿ ಅನುಸರಿಸಿದರು. ಜೊತೆಗೆ ಕೃಷಿಗೆ ಪೂರಕವಾಗಿ ಹೈನುಗಾರಿಕೆ ಹಾಗೂ ಜೇನು ಕೃಷಿಯಲ್ಲೂ ತೊಡಗಿಸಿಕೊಂಡರು. ಹಾಗೆಯೇ ಬೆಳೆಗಳಿಗೆ ಸ್ವಂತ ಉತ್ಪಾದನೆಯಾದ ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್, ವರ್ಮಿ ಕಾಂಪೋಸ್ಟ್‌ಗಳನ್ನು ಬಳಸಿಕೊಳ್ಳುತ್ತಾ ರಸಸಾರ ಘಟಕವನ್ನು ಸ್ಥಾಪಿಸಿದರು. ಜೊತೆಗೆ ಮನೆ ಬಳಕೆಗೆ ಉರುವಲಾಗಿ ಗೊಬ್ಬರ ಅನಿಲ, ಸೋಲಾರ್ ಹಾಗೆಯೇ ಬಿಸಿನೀರು ಮತ್ತು ಡ್ರೈಯರ್‌ಗೆ ತಮ್ಮಲ್ಲೇ ದೊರೆಯುವ ಕಟ್ಟಿಗೆ ಬಳಸುತ್ತಾರೆ. ತೋಟದಲ್ಲಿ ಸಾಕಷ್ಟು ಇಂಗುಗುಂಡಿಗಳನ್ನು ರಚಿಸಿ, ತಗ್ಗು ಪ್ರದೇಶದಲ್ಲಿ ದೊಡ್ಡದಾದ ಮದಗ ನಿರ್ಮಿಸಿ ನೀರಿನ ಸಂರಕ್ಷಣೆ ಮಾಡಿದ್ದಾರೆ. ಭತ್ತದಲ್ಲಿ ಶ್ರೀ ಪದ್ಧತಿಯನ್ನು ಗ್ರಾಮದಲ್ಲಿ ಮೊದಲನೆಯದಾಗಿ ಮಾಡಿ ಕಡಿಮೆ ಖರ್ಚು ಹೆಚ್ಚು ಉತ್ಪಾದನೆ, ಕಡಿಮೆ ಕೂಲಿ ಹಾಗು ಕೀಟ ಬಾಧೆ ಇಲ್ಲದೇ ಉತ್ತಮ ಇಳುವರಿ ಪಡೆದಿರುವುದು. ಹನಿನೀರಾವರಿ ಅಳವಡಿಸಿ ನೀರಿನ ಮಿತವ್ಯಯ ಬೆಳೆಗಳಿಗೆ ಬೆಳೆಯುಳಿಕೆಗಳಿಂದ ಮುಚ್ಚಿಗೆ ಏರ್ಪಡಿಸಿ ಮಣ್ಣು ಮತ್ತು ನೀರಿನ ಸಂರಕ್ಷಣೆ, ಗೋಬರ್ ಅನಿಲ ಘಟಕದ ತ್ಯಾಜ್ಯಕ್ಕೆ ಮನೆಯ ತ್ಯಾಜ್ಯ ನೀರು ಇತರ ಪೋಷಕಾಂಶ ಸೇರಿಸಿ (ಜೀವಾಮೃತ) ಬೆಳೆಗಳಿಗೆ ಪೈಪಿನ ಮೂಲಕ ಹಾಯಿಸಿ ಕೂಲಿಗಳ ಅವಲಂಬನೆ ಇಲ್ಲವಾಗಿಸಿರುವುದು. ಬೆಳೆಯೊಂದಿಗೆ ಹೊಂದಾಣಿಕೆಯಾಗುವ ಮಿಶ್ರ ಬೆಳೆ ಬೆಳೆದು ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆ ಮಾಡಿ ಹೆಚ್ಚಿನ ಇಳುವರಿ ಹಾಗೂ ಸುಸ್ಥಿರ ಕೃಷಿ ಮಾಡಿರುವುದು ಮತ್ತು ಕೃಷಿ ಪದ್ಧತಿಯಲ್ಲಿ ಸಂಶೋಧನೆಯನ್ನು ಮಾಡಿರುವುದು ಇವರ ಸಾಧನೆ. ಇವರ ಕೃಷಿ ಮಾಹಿತಿಯನ್ನು ಕೃಷಿ ಇಲಾಖೆ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಹಾಗೂ ರಾಜ್ಯದ ಅನೇಕ ಸಂಘ-ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಅಳವಡಿಕೆಗೆ ನೀಡುತ್ತಿದೆ. ಇವರ ಸಾಧನೆಗೆ ಸ್ಥಳೀಯ ಹಲವಾರು ಸಂಘ-ಸಂಸ್ಥೆಗಳ ಪುರಸ್ಕಾರ ದೊರೆತಿದ್ದು, 2008ನೇ ಸಾಲಿನ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಇವರಿಂದ 'ಕಾರ್ಪ್ ರೈತ' ಪ್ರಶಸ್ತಿ, 2007-08ನೇ ಸಾಲಿನಲ್ಲಿ ಭತ್ತದ ಬೆಳೆ ಸ್ಪರ್ಧೆಯಲ್ಲಿ ಉಡುಪಿ ತಾಲೂಕು ಮಟ್ಟದ ಪ್ರಥಮ ಪ್ರಶಸ್ತಿ, ಕೃಷಿ ಇಲಾಖೆಯಿಂದ 2009-10ನೇ ಸಾಲಿನಲ್ಲಿ ಉಡುಪಿ ತಾಲೂಕು ಮಟ್ಟದ ಉತ್ತಮ ರೈತ ಪ್ರಶಸ್ತಿ, 2011-12ನೇ ಸಾಲಿಗೆ ಗೇರು ಮತ್ತು ಕೊಕ್ಕೊ ನಿರ್ದೇಶನಾಲಯ ಕೊಚ್ಚಿ ಇವರಿಂದ ಗೇರು ಮತ್ತು ಕೊಕ್ಕೊ ಉತ್ತಮ ಬೆಳೆಗಾರ ಪ್ರಶಸ್ತಿ, 2013-14ನೇ ಸಾಲಿನ ಗುಜರಾತ್ ಅಹಮದಾಬಾದ್‌ನಲ್ಲಿ ನಡೆದ ವಿಶ್ವ ಕೃಷಿ ಸಮ್ಮೇಳನದಲ್ಲಿ ಉತ್ತಮ ರೈತ ಪ್ರಶಸ್ತಿ (ನರೇಂದ್ರ ಮೋದಿಯವರಿಂದ) ಪಡೆದಿರುತ್ತಾರೆ. ಸ್ಥಳೀಯ ಸಂಘ-ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸುತ್ತಿದ್ದು, ಕೇಂದ್ರ ಹಾಗೂ ರಾಜ್ಯದ ವಿವಿಧ ಕೃಷಿ ಅಭಿವೃದ್ಧಿ ಇಲಾಖೆಗಳ ಸಂಪರ್ಕವನ್ನೂ ಹೊಂದಿದ್ದಾರೆ. ಹಾಗೆಯೇ ಅನೇಕ ಕೃಷಿ ಸಂಬಂಧಿತ ಪತ್ರಿಕೆಗಳ ಸದಸ್ಯರಾಗಿದ್ದಾರೆ. ಕೃಷಿ ಇಲಾಖಾ ವತಿಯಿಂದ ಚೀನಾ ಪ್ರವಾಸ, ರಾಜ್ಯ ಹಾಗೂ ಹೊರ ರಾಜ್ಯಾದ್ಯಂತ ಕೃಷಿ ತಾಂತ್ರಿಕತೆಗಳ ಪ್ರಸರಣೆ, ಶಾಲಾ ಮಕ್ಕಳಿಗೆ ಕೃಷಿದರ್ಶನ ಕಾರ್ಯಕ್ರಮಗಳನ್ನು ನೀಡುತ್ತಿರುವ 57ರ ಹರೆಯದ ಶ್ರೀ ಕೆ. ಶಂಭುಶಂಕರ ರಾವ್‌ರವರಿಗೆ ಈ ಬಾರಿಯ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ನಿಜವಾಗಿಯೂ ಸಾರ್ಥಕ ಎನಿಸುತ್ತಿದೆ. ಪತ್ನಿ ಪ್ರಭಾವತಿ ಮಕ್ಕಳಾದ ವಿನಯ, ವಿನುತ, ವಿನೋದ, ಇವರುಗಳ ಸಹಕಾರ, ಊರವರ ಮತ್ತು ಬಂಧುಗಳ ಪ್ರೋತ್ಸಾಹ ಇವರ ಸಾಧನೆಗೆ ಸಹಕಾರಿಯಾಗಿದೆ. ನಮ್ಮ ಸಮಾಜಬಾಂಧವರಾದ ಶ್ರೀಯುತ ರಾಯರನ್ನು ಅಭಿನಂದಿಸುವುದರೊಂದಿಗೆ ಮುಂದಿನ ದಿನಗಳಲ್ಲೂ ಇವರ ಈ ಸಾಧನೆ ಇನ್ನಷ್ಟು ಬೆಳೆದು ಎಲ್ಲರಿಗೂ ಮಾದರಿಯಾಗಲಿ ಎಂದು ಹಾರೈಸೋಣ.

– ಕೆ. ದಿನಮಣಿ ಶಾಸ್ತ್ರಿ, ಬ್ರಹ್ಮಾವರ.

# ಯುವ ಪ್ರತಿಭೆ : ರಂಗೋಲಿ ರಂಗಣ್ಣ

-ಜಿ.ಕೆ.ಕೋಲ್ಪೆ



ನಮ್ಮ ಸಮಾಜದ 28ರ ಹರೆಯದ ಸುಂದರ ಯುವಕ ಶ್ರೀಮಾನ್ ಮಹೇಶ ರಾವ್ ಇವರೇ ಈಗ ಪರಿಚಯಿಸುವ ನವಪ್ರತಿಭೆ. ತಂದೆ ಶ್ರೀ ವಿಲಾಸ್ ರಾವ್, ತಾಯಿ ಇನ್ನಂಜೆ ಉಂಡಾರಿನ ಶ್ರೀಮತಿ ತಾರಾ ರಾವ್. ಇವರು ಶಾರದಾ ಮಂಟಪದ ಯುವ ಮತ್ತು ಕ್ರೀಡಾ ವೇದಿಕೆಯ ಪದಾಧಿಕಾರಿಗಳಾದ ಉಂಡಾರು ಕೃಷ್ಣರಾಜ ರಾವ್ ಹಾಗೂ ಕರಂಬಳ್ಳಿ ವಸಂತರಾವ್‌ರವರ ಸಂಬಂಧಿ ಶ್ರೀಯುತರು ಬಿಕಾಂ ಮುಗಿಸಿ ಎಮ್‌ಬಿಎ ಕಲಿಯುತ್ತಿದ್ದಾರೆ. ರಂಗೋಲಿ ಹಾಗೂ ಮೆಹಂದಿ ಹಾಕುವ ಕಲೆಯನ್ನು 5 ವರ್ಷ ಮೇಲ್ಪಟ್ಟವರಿಗೆ ಕಲಿಸುತ್ತಿದ್ದಾರೆ. ಹೀಗೆ ಸುಮಾರು ಮುನ್ನೂರು ವಿದ್ಯಾರ್ಥಿಗಳಿಗೆ ತರಬೇತಿ ಕೊಟ್ಟಿದ್ದಾರೆ. ಬಾಲ್ಯದಿಂದಲೇ ರಂಗೋಲಿ ಹುಚ್ಚು ಬೆಳೆಸಿಕೊಂಡ ಇವರದ್ದು ಗುರುವಿಲ್ಲದ ಸಾಧನೆ. ನಾನಾ ಪ್ರಕಾರದ ರಂಗೋಲಿ ಬಿಡಿಸುವುದರಲ್ಲಿ ಪರಿಣತರು. ಹೂವು, ನವಧಾನ್ಯಗಳು, ಮಸಾಲೆ, ಕಲ್ಲುಪ್ಪು, ಒಣಹಣ್ಣುಗಳು, ತರಕಾರಿ, ಹಣ್ಣುಹಂಪಲುಗಳನ್ನು ಉಪಯೋಗಿಸಿ ವಿವಿಧ ರೀತಿಯ ರಂಗೋಲಿ ಹಾಕುತ್ತಾರೆ. ಅರೇಬಿಕ್ ಹಾಗೂ ರಾಜಸ್ಥಾನ ಪದ್ಧತಿಯಲ್ಲಿ ಮೆಹಂದಿ ಹಾಕುವುದರಲ್ಲಿ ನಿಷ್ಣಾತರು. ಈ ಸಾಧನೆಯಲ್ಲಿ ಅವರಿಗೆ ದೊರೆತ ಪ್ರಶಸ್ತಿಗಳ ವಿವರ ಹೀಗಿದೆ. ಸರಕಾರದ ಸಾಹಿತ್ಯ ಮತ್ತು ಕಲಾ ವಿಭಾಗದಲ್ಲಿ, 2002ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ 3ನೇ ಪ್ರಶಸ್ತಿ, ರಾಜ್ಯಮಟ್ಟದಲ್ಲಿ 2ನೇ ಪ್ರಶಸ್ತಿ ಹಾಗೂ ರಾಷ್ಟ್ರಮಟ್ಟದಲ್ಲಿ ಬಂಗಾರದ ಪದಕ ಇವರಿಗೆ ದೊರೆತಿದೆ. 2013ರಲ್ಲಿ ಕಲಾವಿದ ಬಿ.ಪಿ.ಬಾಯರಿ ಪ್ರಶಸ್ತಿ 'ರಂಗೋಲಿಭೀಷ್ಮ'ವನ್ನು ತನ್ನದಾಗಿಸಿ ಕೊಂಡಿದ್ದಾರೆ. 2013ರಲ್ಲಿ ರಾಷ್ಟ್ರಮಟ್ಟದ ಪೈಂಟಿಂಗ್ ಸ್ಪರ್ಧೆಯಲ್ಲಿ ಹಯಗ್ರೀವ ಮತ್ತು ಭೂವರಾಹ ದೇವರು ಗಳ ರಂಗೋಲಿ ಚಿತ್ರ ಗಳಿಗೆ ಸೋದೆ ಮಠಾಧೀಶರಿಂದ ಪ್ರಶಸ್ತಿ ದೊರೆತಿದೆ. ಅದೇ ವರ್ಷ ಶೃಂಗೇರಿಯಲ್ಲಿ ಲಕ್ಷ ದೀಪೋತ್ಸವ ಸಂದರ್ಭದಲ್ಲಿ ಬಿಡಿಸಿದ 40 ಅಡಿ ಉದ್ದಗಲದ ಬೃಹತ್ ರಂಗೋಲಿಗೆ ಜಗದ್ಗುರುಗಳಿಂದ ಸನ್ಮಾನಿಸಲ್ಪಟ್ಟಿದ್ದಾರೆ. ರಥೋತ್ಸವ ಸಮಯದಲ್ಲಿ ಕೃಷ್ಣಮಠದ ಎದುರಿನಲ್ಲಿ ಬಿಡಿಸುವ ರಂಗೋಲಿಗಳ ಚಂದ ವರ್ಣನಾತೀತ. ಉಡುಪಿಯ ಮದರ್ ಆಫ್ ಸಾರೋಸ್ ಚರ್ಚ್‌ನಲ್ಲಿ ಸರ್ವಧರ್ಮ ದೀಪಾವಳಿ ಆಚರಣೆಯಲ್ಲಿ ಬಿಡಿಸಿದ 25 ಅಡಿ ಉದ್ದಗಲದ ರಂಗೋಲಿಗೆ ಕ್ರಿಶ್ಚಿಯನ್ ಸಮುದಾಯದಿಂದಲೂ ಗೌರವಿಸಲ್ಪಟ್ಟಿದ್ದಾರೆ. 2007ರಿಂದ 2011ರ ತನಕ ಬೆಳಗಾವಿಯ ಇಸ್ಕಾನ್ ದೇವಸ್ಥಾನದಲ್ಲಿ ರಂಗೋಲಿ ವಿಭಾಗಕ್ಕೆ ನೇಮಿಸಲ್ಪಟ್ಟಿದ್ದರು. 2007ರಲ್ಲಿ ರಾಜ್ಯಮಟ್ಟದ ನೃತ್ಯ, ಪೈಂಟಿಂಗ್, ರಂಗೋಲಿ, ಆವೆಮಣ್ಣಿನ ಗೊಂಬೆ ಇತ್ಯಾದಿ ತಯಾರು ಮಾಡುವ ಸ್ಪರ್ಧೆಗಳಿಗೆ ಇವರು ಮುಖ್ಯ ತೀರ್ಪುಗಾರರಾಗಿದ್ದರು. ಇವರು ವಿದೇಶಿ ನೃತ್ಯಗಳಲ್ಲಿಯೂ ಪರಿಣತರು. ಹಾಗೂ ರಾಷ್ಟ್ರಮಟ್ಟದ ಓಟಗಾರ. ಯುವ ಸರ್ದಾರ್ಜಿಯಂತೆ ವೇಷ ಭೂಷಣದಲ್ಲಿ ಶೋಭಿಸುವ ಶ್ರೀ ಮಹೇಶ್‌ರವರು ಮಧ್ಯಾಹ್ನ 2 ಗಂಟೆಯಿಂದ ಸಂಜೆ 6ರ ತನಕ ಕೃಷ್ಣಮಠದ ಗೀತಾ ಮಂದಿರದಲ್ಲಿ ತನ್ನ ಕಾಯಕದಲ್ಲಿ ಮಗ್ನರಾಗಿರುತ್ತಾರೆ. ಅವರ ಮೊಬೈಲ್ ಸಂಖ್ಯೆ 7259914498. ಮಹೇಶ್‌ರವರ ಬಾಳು ಉಜ್ವಲವಾಗಲೆಂದು ಹಾರೈಸೋಣ.

# ನಾಡಿಗೆ ಹೆಮ್ಮೆ ತಂದ ಹೆಮ್ಮಾಡಿಯ ಹುಡುಗ

ಅಗ್ನಿತೇಜ್.ಎಲ್. ಚಿಕ್ಕಮಗಳೂರು ಜಿಲ್ಲೆ ಆಲ್ದೂರಿನ ಪೂರ್ಣಪ್ರಜ್ಞ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿಯಾಗಿದ್ದು ಗಣಿತದ ಬಹುಭುಜ ಎಂಬ ಪಾಠದ ಸಮಸ್ಯೆಯನ್ನು ಬಿಡಿಸುವಾಗ 2 ಸರಳ ಸೂತ್ರಗಳನ್ನು ಕಂಡು ಹಿಡಿದಿರುತ್ತಾನೆ. ಅವುಗಳು ಈ ಕೆಳಗಿನಂತಿದೆ.

ಸೂತ್ರ 1) : ಪ್ರತಿ ಒಳಕೋನವು ಅನುಕ್ರಮ ಹೊರಕೋನದ ಎಷ್ಟರಷ್ಟಿದೆ ಎಂದು ಕೊಟ್ಟಾಗ ಬಾಹುಗಳ ಸಂಖ್ಯೆಯನ್ನು ಕಂಡುಹಿಡಿಯುವುದು : $n=2(a+1)$. ಇಲ್ಲಿ $n=$ ಬಾಹುಗಳ ಸಂಖ್ಯೆ $a=$ ಪ್ರತಿ ಒಳಕೋನವು ಅನುಕ್ರಮ ಹೊರ ಕೋನದ ಎಷ್ಟರಷ್ಟಿದೆ ಎಂದು ಸೂಚಿಸುತ್ತದೆ.

ಸೂತ್ರ 2 : ಪ್ರತಿ ಹೊರ ಕೋನವು ಅನುಕ್ರಮ ಒಳ ಕೋನದ ಎಷ್ಟರಷ್ಟಿದೆ ಎಂದು ಕೊಟ್ಟಾಗ ಬಾಹುಗಳ ಸಂಖ್ಯೆಯನ್ನು ಕಂಡು ಹಿಡಿಯುವುದು. $n=2(^1/_t+1)$. $n=$ ಬಾಹುಗಳ ಸಂಖ್ಯೆ $t=$ ಪ್ರತಿ ಹೊರಕೋನವು ಅನುಕ್ರಮ ಒಳ ಕೋನದ ಎಷ್ಟರಷ್ಟಿದೆ ಎಂದು ಸೂಚಿಸುತ್ತದೆ. ಪಠ್ಯ ಪುಸ್ತಕದ ಪ್ರಕಾರ ಪ್ರತಿ ಸಮಸ್ಯೆಗಳನ್ನೇ ಬಿಡಿಸಲು 2 ಸೂತ್ರಗಳನ್ನು ಅಳವಡಿಸಬೇಕಾಗುತ್ತದೆ. ಆದರೆ ಅಗ್ನಿತೇಜ್ ಕಂಡುಹುಡುಕಿದ ಒಂದೇ ಸೂತ್ರದ ಸಹಾಯದಿಂದ ಸಮಸ್ಯೆಯನ್ನು ಸರಳವಾಗಿ ಬಿಡಿಸಬಹುದು. ಈ ಸೂತ್ರಗಳು ಸುಲಭ, ಸರಳ ಹಾಗೂ ಮಕ್ಕಳಿಗೆ ಬೇಗ ಮನದಟ್ಟು ಆಗುವಂತೆ ಇರುವುದರಿಂದ ಪಠ್ಯ ಪುಸ್ತಕ ರಚನಾ ಸಮಿತಿಯವರು ಹಾಗೂ ಈ ಸೂತ್ರವು ಸರಿ ಎಂದು ಕಂಡು ಬಂದಲ್ಲಿ ಮುಂಬರುವ 9ನೇ ತರಗತಿಯ ಪಠ್ಯ ಪುಸ್ತಕದಲ್ಲಿ ಅಳವಡಿಸಿದರೆ ಎಲ್ಲಾ ಶಾಲಾ ಮಕ್ಕಳಿಗೆ ತುಂಬಾ ಅನುಕೂಲವಾಗುತ್ತದೆ. ಈ ಬಗ್ಗೆ ಈಗಾಗಲೇ ಮಾನ್ಯ ಶಿಕ್ಷಣ ಮಂತ್ರಿಗಳು ಪಠ್ಯ ಪುಸ್ತಕಕ್ಕೆ ಅಳವಡಿಸಲು ಡಿ.ಎಸ್.ಇ.ಆರ್.ಟಿಗೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಅಲ್ಲದೇ ಕರ್ನಾಟಕ ಸರ್ಕಾರದ ಶಿಕ್ಷಣ ಮಂತ್ರಿಗಳು, ಗಣಿತ ಪಠ್ಯ ಪುಸ್ತಕ ರಚನಾ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಪೂಜ್ಯ ಶ್ರೀ ಶ್ರೀ ವಿಶ್ವಪ್ರಿಯ ತೀರ್ಥ ಸ್ವಾಮಿಗಳು, ಅಧ್ಯಕ್ಷರು, ಅದಮಾರು ಮಠ ವಿದ್ಯಾ ಸಂಸ್ಥೆ, ಉಡುಪಿ ಇವರೆಲ್ಲರಿಗೂ ಪತ್ರ ಮುಖೇನ ತಿಳಿಸಲಾಗಿದೆ.

ಪೂರ್ಣ ಪ್ರಜ್ಞ ಶಾಲೆ, ಆಲ್ದೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮೂಲತಃ ಕುಂದಾಪುರ ತಾಲೂಕಿನ ಲಕ್ಷ್ಮೀನಾರಾಯಣ ಮತ್ತು ಇಂದ್ರಾಣಿ ದಂಪತಿಯ ಪುತ್ರ ಅಗ್ನಿತೇಜ್. ಎಲ್. ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿ ಬಾಲ್ಯದಿಂದಲೂ ಮುಂದಿದ್ದು ವಿನಯ, ವಿಧೇಯತೆ ಮತ್ತು ಪ್ರತಿಭೆಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರನಾದ ವಿದ್ಯಾರ್ಥಿ.

ದಿನಾಂಕ 26-08-15 ರಂದು ಚಿಕ್ಕಮಗಳೂರು ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಶೈಕ್ಷಣಿಕ ಅಧಿವೇಶನದಲ್ಲಿ ಮಾನ್ಯ ಉಪನಿರ್ದೇಶಕರು ಹಾಗೂ ಮಾನ್ಯ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಮತ್ತು ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಮ್ಮುಖದಲ್ಲಿ ಈ ಸೂತ್ರಗಳನ್ನು ಮಂಡಿಸಿರುತ್ತಾನೆ.

**ಬಾಲಪ್ರತಿಭೆ ಅಗ್ನಿತೇಜರಿಗೆ ಅಭಿನಂದನೆಗಳು.**

-ಜಾಹ್ನವಿ




ತಂತ್ರಾಡಿ ವಿಶ್ವನಾಥ ಶಾನುಭೋಗ್

☎ 94487 24161
97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

॥ ಶ್ರೀ ಮಹಾಗಣಪತಯೇ ನಮಃ ॥  ॥ ಶ್ರೀ ಸುಬ್ರಹ್ಮಣ್ಯಃ ಪ್ರಸೀದತು ॥
ಷಡಾನನಂ ಕುಂಕುಮರಕ್ತವರ್ಣಂ ಮಹಾಮತಿಂ ದಿವ್ಯ ಮಯೂರ ವಾಹನಂ ।
ರುದ್ರಸ್ಯ ಸೂನುಂ ಸುರಸೈನ್ಯನಾಥಂ ಗುಹಂ ಸದಾ ಶರಣಮಹಂ ಪ್ರಪದ್ಯೇ ॥

# ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ

ಭಗವದ್ಭಕ್ತರೇ                    ಕೊಕ್ರಾಡಿ, ತಾ.09-11-2015.

**ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರ ಪರಮಾನುಗ್ರಹದೊಂದಿಗೆ**
ಸ್ವಸ್ತಿ! ಶ್ರೀ ಮನ್ಮಥ ನಾಮ ಸಂವತ್ಸರದ ಮಾರ್ಗಶಿರ ಶುಕ್ಲ ೬,
**ದಿನಾಂಕ 17-12-2015ನೇ ಗುರುವಾರ**

## ಷಷ್ಠಿ ಮಹೋತ್ಸವವು ನೆರವೇರಲಿರುವುದು.

ಈ ಪ್ರಯುಕ್ತ ಭಕ್ತಾಭಿಮಾನಿಗಳಾದ ತಾವೆಲ್ಲರೂ ಈ ದೇವತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ತನು ಮನ ಧನಗಳೊಂದಿಗೆ ಸಹಕರಿಸಿ, ಶ್ರೀ ಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಭಗವತ್ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಅರ್ಚಕರು**                    **ಧರ್ಮದರ್ಶಿಗಳು**

ಪುಷ್ಯ ಶುದ□ಷಷ್ಠಿ **ದಿನಾಂಕ 15-01-2016ನೇ ಶುಕ್ರವಾರದಂದು**
**ಕಿರುಷಷ್ಠಿ ಉತ್ಸವವು** ಸಂಪನ್ನಗೊಳ್ಳಲಿರುವುದು.

**ವಿಶೇಷ ಕಾರ್ಯಕ್ರಮಗಳು :** ಪೂರ್ವಾಹ್ನ ಪವಮಾನ ಅಭಿಷೇಕ, ಶ್ರೀ ರುದ್ರಾಭೀಷೇಕ, ಶ್ರೀ ಸುಬ್ರಹ್ಮಣ್ಯ ಹೋಮ, ಮಹಾಪೂಜೆ, ಅನ್ನಸಂತರ್ಪಣೆ. ಸಾಯಂಕಾಲ ರಂಗಪೂಜೆ

ಮೀನ ಮಾಸ ದಿನ ೨೫ ಸಲುವ ದಿನಾಂಕ **08-04-2016ನೇ ಶುಕ್ರವಾರದಂದು**
**ಪ್ರತಿಷ್ಠಾ ದಿನೋತ್ಸವ**ವು ಸಂಪನ್ನಗೊಳ್ಳಲಿದೆ.

---

॥ ಶ್ರೀ ಗುರುಭ್ಯೋ ನಮಃ ॥  ॥ ಶ್ರೀ ಸುಬ್ರಹ್ಮಣ್ಯೋಽನುಗೃಹ್ಣಾತು ॥

# ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ

**ಪಾವಂಜೆ, ಹಳೆಯಂಗಡಿ-574146, ದ.ಕ. ಫೋನ್ : 0824-2283393.**

ಆತ್ಮೀಯರೇ,                    ಪಾವಂಜೆ, 08-11-2015

ಸ್ವಸ್ತಿ ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯವರ್ಯೇತ್ಯಾದಿ ಸಮಸ್ತ ಬಿರುದಾವಲೀ ವಿರಾಜಮಾನರಾದ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ **ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ** ಶ್ರೀ ಮನ್ಮಥನಾಮ ಸಂವತ್ಸರದ ಮಾರ್ಗಶಿರ ಶುದ□ಚತುರ್ಥಿಯಿಂದ ಷಷ್ಠಿಯವರೆಗೆ ದಿನಾಂಕ **15-12-2015ನೇ ಮಂಗಳವಾರದಿಂದ ದಿನಾಂಕ 17-12-2015 ನೇ ಗುರುವಾರ ವರೆಗೆ** ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ

## ಚಂಪಾಷಷ್ಠಿ ಮಹೋತ್ಸವವು

ಮೂಡುಗಣಪತಿ ಸೇವೆ, ವೈದಿಕ ನಾಗಮಂಡಲ ಹಾಗೂ ಸುಬ್ರಹ್ಮಣ್ಯ ವ್ರತದೊಂದಿಗೆ ಜರಗಲಿರುವುದು.
ಈ ಮಹೋತ್ಸವಕ್ಕೆ ತಾವೆಲ್ಲರೂ ಬಂದು ಉತ್ಸವಾದಿಗಳಲ್ಲಿ ಭಾಗವಹಿಸಿ, ಶ್ರೀ ದೇವರ ಮೂಲ ಮೃತ್ತಿಕಾ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಯಂ.ಶಶೀಂದ್ರ ಕುಮಾರ್**                    **ಡಾ। ಯಾಜಿ ಎಚ್.ನಿರಂಜನ ಭಟ್**
ಆಡಳಿತ ಮೊಕ್ತೇಸರರು                    ಧರ್ಮದರ್ಶಿಗಳು
**ಮತ್ತು ಆಡಳಿತ ಮಂಡಳಿಯ ಸದಸ್ಯರು**

**ತಾ.17-12-2015 ಗುರುವಾರದಿಂದ 23-12-2015 ಬುಧವಾರದ ವರೆಗೆ ಶ್ರೀ ರಾಮಚಂದ್ರ ಕೃಪಾಪೋಷಿತ ಯಕ್ಷಗಾನ ಮಂಡಳಿ, ಹೊಸನಗರ ಇವರು ಪೌರಾಣಿಕ ಪ್ರಸಂಗಗಳನ್ನು ಶ್ರೀ ಕ್ಷೇತ್ರದ ಶಾರಧ್ವತ ಯಜ್ಞಾಂಗಣದಲ್ಲಿ ಪ್ರತಿನಿತ್ಯ ಸಂಜೆ 5.30 ರಿಂದ ಆಡಿತೋರಿಸಲಿದ್ದಾರೆ.**

**ಕಿರುಷಷ್ಠಿ ಉತ್ಸವವು 15-01-2016 ರಂದು ಶುಕ್ರವಾರ ಜರಗಲಿದೆ**

---

## ಪ್ರಕಟಣೆ

ದಿನಾಂಕ:14-01-2016ನೇ ಗುರುವಾರ ಮಕರ ಸಂಕ್ರಮಣದಂದು ಸೂರ್ಯೋದಯದಿಂದ ಮರುದಿನ ಸೂರ್ಯೋದಯದವರೆಗೆ ನಮ್ಮ ಸಮಾಜದ ಖ್ಯಾತ ಹರಿದಾಸರಾದ ಶ್ರೀ ಹರಿದಾಸ ಲಕ್ಷ್ಮಿನಾರಣಪ್ಪಯ್ಯ ಅವರ ಪುಣ್ಯ ದಿನದ ಸ್ಮರಣೆಗಾಗಿ ಎಂದಿನಂತೆ ಕೃತಿಗಳನ್ನು ಶಾಸ್ತ್ರೀಯ ಸಂಗೀತ ಮತ್ತು ಭಜನೆಗಳ ರೂಪದಲ್ಲಿ ಹಾಡುವ ಕಾರ್ಯಕ್ರಮ ಆರಾಧನೋತ್ಸವ ಶ್ರೀ ಪಾವಂಜೆ ದೇವಸ್ಥಾನದಲ್ಲಿ ನಡೆಯಲಿದೆ. ಎಲ್ಲರಿಗೂ ಆತ್ಮೀಯ ಸ್ವಾಗತ.



**ಎಮ್. ದೇವಾನಂದ್ ಭಟ್**    Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


---

ಬ್ರಹ್ಮ-ಕಲಶೋತ್ಸವದ ಸಂಭ್ರಮದಲ್ಲಿ

# ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಅಂಚೆ : ಕೋಡಿಂಬಾಡಿ-574287, ಪುತ್ತೂರು ತಾಲೂಕು, ದ.ಕ.**

## ಆಮಂತ್ರಣ

ಆತ್ಮೀಯ ಸಮಾಜಬಾಂಧವರೇ

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಯಂಗಳವರ ಮತ್ತು ತತ್‌ಕರಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತಿ ಸನ್ನಿದಾನಂಗಳವರ ಪೂರ್ಣ ಅನುಗ್ರಹದೊಂದಿಗೆ

ಪುತ್ತೂರು ತಾಲೂಕು ಕೋಡಿಂಬಾಡಿ ಗ್ರಾಮದ ಮಠದಬೆಟ್ಟು ಶ್ರೀ ರಾಜ ರಾಜೇಶ್ವರೀ ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಕಳೆದ ದಿನಾಂಕ 01-06-2013ರಂದು ಬಾಲಾಲಯದಲ್ಲಿ ಶ್ರೀ ದೇವಿಯ ಪ್ರತಿಷ್ಠಾಕಾರ್ಯಕ್ರಮವನ್ನು ನಡೆಸಿ, ಅಂದಿನಿಂದ ನಿರಂತರವಾಗಿ ಜೀರ್ಣೋದಾ□ದ ಕೆಲಸ ನಡೆದುಕೊಂಡು ಬಂದಿರುತ್ತದೆ. ಸಮಾಜ ಬಾಂಧವರ ಹಾಗೂ ಊರಿನ ಭಕ್ತಾಧಿಗಳ ಸಹಕಾರದಿಂದ ಜೀರ್ಣೋದಾ□ಕಾರ್ಯ ಕೊನೆಯ ಹಂತಕ್ಕೆ ತಲುಪಿದ್ದು, ಮುಂದಿನ ವರ್ಷ ಜನವರಿ 2016ರ **ದಿನಾಂಕ 19-01-2016ರಿಂದ ದಿನಾಂಕ 24-01-2016ರ** ತನಕ ಹೆಬ್ಬೂರಿನಲ್ಲಿರುವ ಶ್ರೀಶ್ರೀ ಮಾಧವಾಶ್ರಮ ಸ್ವಾಮಿಗಳ ದಿವ್ಯ ಉಪಸ್ಥಿತಿಯಲ್ಲಿ ಬ್ರಹ್ಮಶ್ರೀ ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಶ್ರೀ ರಾಜರಾಜೇಶ್ವರೀ ಅಮ್ಮನವರ **ಬ್ರಹ್ಮ ಕಲಶೋತ್ಸವ** ನಡೆಯಲಿದೆ, ಈ ಪುಣ್ಯ ಕಾರ್ಯದಲ್ಲಿ ಸಮಾಜಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ತನು-ಮನ-ಧನಗಳಿಂದ ಸಹಕರಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**ಅಧ್ಯಕ್ಷರು ಮತ್ತು ಸರ್ವಸದಸ್ಯರು**                    **ಅಧ್ಯಕ್ಷರು ಮತ್ತು ಸದಸ್ಯರು**
ಜೀರ್ಣೋದಾ□ ಸಮಿತಿ                    ಬ್ರಹ್ಮಕಲಶೋತ್ಸವ ಸಮಿತಿ
**ಆಡಳಿತ ಮಂಡಳಿಯ ಸರ್ವಸದಸ್ಯರು**

**ವಿ.ಸೂ. : ಭಕ್ತಾಧಿಗಳು ದೇಣಿಗೆ ಕಳುಹಿಸುವವರು ಕರ್ನಾಟಕ ಬ್ಯಾಂಕ್ ಪುತ್ತೂರು ಶಾಖೆ ಎಸ್.ಬಿ. ಖಾತಾಸಂಖ್ಯೆ 6042500103445201 ಜೀರ್ಣೋದಾ□ ಸಮಿತಿ ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ.**

---

# ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | | |
|---|---|---|
| ಮಂಗಳಾರತಿ | : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ | : | ''**ಸತ್ಸಂಗದವರಿಂದ ಭಜನೆ**'' ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ | : | ''**ಸೌಂದರ್ಯಲಹರಿ ಪಾರಾಯಣ**'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : | ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.28-12-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.08-01-2016 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**


**ತಾ.30-12-2015 ಹಾಗೂ ತಾ.14-01-2016 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

*Krishna Rao*    Ph : 2520652
Mob. : 9902029048
KISHAN

Studio & Video

Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

## ಶುಭ ವಿವಾಹ

ಹೊಸತೋಟ ಶ್ರೀಮತಿ ಮತ್ತು ಶ್ರೀ ರಾಮಚಂದ್ರ ರಾಯರ ಪುತ್ರ **ಸುಧಾಕರ** ಹಾಗೂ ಪಾದೆಬೆಟ್ಟು ಶ್ರೀಮತಿ ಮತ್ತು ಶ್ರೀ ದೇವರಾಯ ಶರ್ಮರವರ ಪುತ್ರಿ **ಅಕ್ಷತಾಳ** ಶುಭ ವಿವಾಹವು ದಿನಾಂಕ 26-10-2015ರಂದು ಮೂಲ್ಕಿ ಬಪ್ಪನಾಡು ಜ್ಞಾನಮಂದಿರದಲ್ಲಿ ಜರಗಿತು.

★★★★ ★★★★

ಪಟ್ಲ ಡಾ। ಪ್ರಭಾಕರ ರಾವ್ ಹಾಗೂ ಶ್ರೀಮತಿ ಡಾ। ಮಧುಬಾಲಾರವರ ಪುತ್ರ **ಕಾರ್ತಿಕೇಯ** ಹಾಗೂ ಬಪ್ಪನಾಡು ಶ್ರೀಕೃಷ್ಣ ರಾಜ ಹಾಗೂ ಶ್ರೀಮತಿ ಮನೋಹರಿಯವರ ಪುತ್ರಿ **ನಮೃತಾ** ಶುಭ ವಿವಾಹವು ದಿನಾಂಕ 30-10-2015ರಂದು ಬಪ್ಪನಾಡಿನ ಜ್ಞಾನಮಂದಿರದಲ್ಲಿ ಜರಗಿತು.

★★★★ ★★★★

ಪುತ್ತೂರು ಶ್ರೀ ಎನ್.ಎಸ್.ನಟರಾಜ ಹಾಗೂ ಶ್ರೀಮತಿ ಚಂದ್ರಶ್ರೀರವರ ಪುತ್ರ **ಹೇಮಂತ** ಹಾಗೂ ಎಲ್ಲೂರು ಜಗದೀಶರಾಯರ ಪೌತ್ರಿ ವ ಶ್ರೀಮತಿ ಪ್ರಸನ್ನರವರ ಪುತ್ರಿ **ಅಮೃತಾ**ಳ ಶುಭವಿವಾಹವು ದಿನಾಂಕ 08-11-2015ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★

ಬೆಂಗಳೂರಿನ ಅಶೋಕ ರಾವ್ ಹಾಗೂ ಶ್ರೀಮತಿ ಪ್ರಭಾರವರ ಪುತ್ರ **ಅನಿಲ್** ಹಾಗೂ ಶಿವಮೊಗ್ಗ ಬಿ.ಆರ್.ವೆಂಕಟೇಶ್ ಹಾಗೂ ಶ್ರೀಮತಿ ಸಂಧ್ಯಾರವರ ಪುತ್ರಿ **ಸವಿತಾ**ಳ ಶುಭ ವಿವಾಹವು ದಿನಾಂಕ13-11-2015ರಂದು ಮಣಿಪಾಲದ ಆರ್‌ಎಸ್‌ಬಿ ಸಭಾಭವನದಲ್ಲಿ ಜರಗಿತು.

★★★★ ★★★★

ಕಾರ್ಕಳ ಮಿಯಾರು ಶ್ರೀ ಯು. ಗುರುರಾಜ ರಾವ್ ಹಾಗೂ ಶ್ರೀಮತಿ ಸುಶೀಲರವರ ಪುತ್ರ **ಜ್ಞಾನೇಶ** ಹಾಗೂ ಮುಡಾರು ಶ್ರೀ ಶ್ರೀಪತಿ ಶಾನುಭಾಗ್ ಹಾಗೂ ಶ್ರೀಮತಿ ಪ್ರೇಮಾರವರ ಪುತ್ರಿ **ನಯನ**ಳ ಶುಭವಿವಾಹವು ದಿನಾಂಕ15-11-2015ರಂದು ಮಿಯ್ಯಾರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಜರಗಿತು.

★★★★ ★★★★

ಬೊಕ್ಕಸ ಶ್ರೀ ಭಾಸ್ಕರ ರಾವ್ ಹಾಗೂ ಶ್ರೀಮತಿ ಶಶಿಕಲಾರವರ ಪುತ್ರ **ಅನೂಪ್ ಕುಮಾರ್** ಹಾಗೂ ಸಿತ್ಲ ಕಟೀಲಿನ ಶ್ರೀ ಪ್ರಭಾಕರ ರಾವ್ ಹಾಗೂ ಶ್ರೀಮತಿ ಹೇಮಲತಾರವರ ಪುತ್ರಿ **ಅನಘಾ ಕಲ್ಪವಲ್ಲಿ**ಯ ಶುಭವಿವಾಹವು ದಿನಾಂಕ 18-11-2015ರಂದು ಮಂಗಳೂರಿನ ಶ್ರೀಸುಬ್ರಹ್ಮಣ್ಯ ಸಭಾಭವನದಲ್ಲಿ ಜರಗಿತು.

★★★★ ★★★★

ಬೆಂಗಳೂರಿನ ಶ್ರೀ ಸುಬ್ರಹ್ಮಣ್ಯ ಬಿ.ಆರ್. ಹಾಗೂ ಶ್ರೀಮತಿ ರಾಜಲಕ್ಷ್ಮಿರವರ ಪುತ್ರ **ಸಂದೇಶ** ಹಾಗೂ ಕೊಟ್ಟಾಯಂ ಶ್ರೀ ರವೀಂದ್ರನ್ ಹಾಗೂ ಶ್ರೀಮತಿ ಜಲಜರವರ ಪುತ್ರಿ **ದಿವ್ಯಾ**ಳ ಶುಭವಿವಾಹವು ದಿನಾಂಕ 23-11-2015ರಂದು ಬೆಂಗಳೂರಿನ ಮಾರಾಡಿ ಸುಬ್ಬಯ್ಯ ಟ್ರಸ್ಟ್ ಕಲ್ಯಾಣ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀ ಬೈಕಾಡಿ ಸದಾಶಿವರಾವ್ ಹಾಗೂ ಶ್ರೀಮತಿ ಪದ್ಮಾವತಿರವರ ಪುತ್ರ **ಮಲ್ಲಿಕಾರ್ಜುನ** ಹಾಗೂ ಮೈಸೂರು ಶ್ರೀ ಪಿ. ವೆಂಕಟರಾಮಯ್ಯ ಹಾಗೂ ಶ್ರೀಮತಿ ಉಷಾರವರ ಪುತ್ರಿ **ಸವಿತಾ**ಳ ಶುಭವಿವಾಹವು ದಿನಾಂಕ 23-11-2015ರಂದು ಕೋಡಿಗೆಹಳ್ಳಿ ಜ್ಞಾನಶಕ್ತಿ ಕಲ್ಯಾಣಮಂಟಪದಲ್ಲಿ ಜರಗಿತು.

★★★★ ★★★★

ಬೆಂಗಳೂರಿನ ಶ್ರೀ ಸುಬ್ರಾಯ ಉಬರಳೆ ಹಾಗೂ ಶ್ರೀಮತಿ ಪ್ರಫುಲ್ಲಾರವರ ಪುತ್ರ **ಭರತೇಶ** ಹಾಗೂ ಕಳಸ ಶ್ರೀ ಪ್ರಭಾಕರ ಹಾಗೂ ಶ್ರೀಮತಿ ಸರೋಜಾರವರ ಪುತ್ರಿ **ಸುನೀತಾ**ಳ ಶುಭವಿವಾಹವು ದಿನಾಂಕ 26-11-2015ರಂದು ಕೊಕ್ರಾಡಿ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನದ ಸಭಾಭವನದಲ್ಲಿ ಜರಗಿತು.

★★★★ ★★★★

ಮಂಗಳೂರಿನ ಶ್ರೀ ಎಮ್.ಶ್ರೀಪತಿ ರಾವ್ ಹಾಗೂ ಶ್ರೀಮತಿ ಲತಾರವರ ಪುತ್ರ **ಪ್ರಶಾಂತ** ಹಾಗೂ ಎಲ್ಲೂರು ಸಜೆ ಶ್ರೀ ಸುಭಾಸ್ ರಾವ್ ಹಾಗೂ ಶ್ರೀಮತಿ ಆಶಾರವರ ಪುತ್ರಿ **ಸ್ನೇಹಾ**ಳ ಶುಭವಿವಾಹವು ದಿನಾಂಕ 27-11-2015ರಂದು ಚಿಟ್ಪಾಡಿ ಯು.ಎಸ್.ನಾಯಕ್ ಸಭಾಭವನದಲ್ಲಿ ಜರಗಿತು.

★★★★ ★★★★

ಮಂಗಳೂರಿನ ಶ್ರೀ ಲಕ್ಷ್ಮೀಶ ಹಾಗೂ ಶ್ರೀಮತಿ ಉಷಾರವರ ಪುತ್ರ **ಭರತೇಶ** ಹಾಗೂ ಮೈಸೂರಿನ ಶ್ರೀಶ ಹಾಗೂ ಶ್ರೀಮತಿ ಪದ್ಮಿನಿರವರ ಪುತ್ರಿ **ಪೂರ್ಣಿಮಾ**ಳ ಶುಭವಿವಾಹವು ದಿನಾಂಕ 06-12-2015ರಂದು ಮಂಗಳೂರಿನ ಶ್ರೀಸುಬ್ರಹ್ಮಣ್ಯ ಸಭಾ ಭವನದಲ್ಲಿ ಜರಗಿತು

### ಧನುರ್ಮಾಸದ ವಿಶೇಷ ದಿನಗಳು

| | |
|---|---|
| 16-12-2015 | ಧನು ಸಂಕ್ರಮಣ, ಮೂಲಾ ಮಹಾನಕ್ಷತ್ರ |
| 17-12-2015 | ಸುಬ್ರಹ್ಮಣ್ಯ ಷಷ್ಠಿ |
| 21-12-2015 | ಸರ್ವೈಕಾದಶಿ, |
| 25-12-2015 | ಹುಣ್ಣಿಮೆ |
| 28-12-2015 | ಸಂಕಷ್ಟಹರ ಚೌತಿ |
| 30-12-2015 | ಪೂರ್ವಾಷಾಢ ಮಹಾನಕ್ಷತ್ರ |
| 05-01-2016 | ಸರ್ವೈಕಾದಶಿ |
| 09-01-2016 | ಉಡುಪಿ ಸಪ್ತೋತ್ಸವ ಆರಂಭ |
| 10-01-2016 | ಎಳ್ಳಮಾವಾಸ್ಯೆ |
| 11-01-2016 | ಉತ್ತರಾಷಾಢ ಮಹಾನಕ್ಷತ್ರ |
| 15-01-2016 | ಮಕರ ಸಂಕ್ರಮಣ ಉತ್ತರಾಯಣ ಪುಣ್ಯಕಾಲ ಉಡುಪಿ ಸುವರ್ಣೋತ್ಸವ |
| 18-01-2016 | ಪೇಜಾವರ ಶ್ರೀಗಳ ಪರ್ಯಾಯೋತ್ಸವ |

## ಗೃಹಪ್ರವೇಶ

ಕೊಕ್ರಾಡಿ ಸುರೇಶ್‌ರಾಯರ ಪುತ್ರ ಚೈತನ್ಯರವರು ತಾ.18-10-2015ರಂದು ಥಾಣೆ ಗೋಡ್‌ಬಂದರ್‌ನಲ್ಲಿರುವ ತಮ್ಮ ನೂತನ ನಿವಾಸದ ಗೃಹಪ್ರವೇಶವನ್ನು ವಿಜೃಂಭಣೆಯಿಂದ ನೆರವೇರಿಸಿದರು.

**ವಿಳಾಸ** : ‘ದಿಯಾ’, ಬಿ3-102, ರೋಸಾ ಗಾರ್ಡನಿಯಾ, ಹೈಪರ್ ಸಿಟಿ ಹಿಂಬದಿ, ಕಾಸರವಾಡವಲಿ, ಗೋಡ್ ಬಂದರ್ ರೋಡ್, ಥಾಣೆ ವೆಸ್ಟ್-400615.

★★★★ ★★★★

ಕೆಮ್ಮಣ್ಣು ನಿಟ್ಟೆಯಲ್ಲಿ ಶ್ರೀ ಕೆ. ಸತ್ಯನಾರಾಯಣ ಹೆಬ್ಬಾರ್ ಹಾಗೂ ಪದ್ಮಜ ದಂಪತಿಗಳು ತಾ.27-10-2015ರಂದು ತಮ್ಮ ನೂತನ ಗೃಹ ‘ಅನುಗ್ರಹ’ದ ಗೃಹ ಪ್ರವೇಶ ಸಮಾರಂಭವನ್ನು ನೆರವೇರಿಸಿದರು

★★★★ ★★★★

ಪಾವಂಜೆಯಯಲ್ಲಿ ಶ್ರೀ ಪ್ರಸನ್ನ ಕುಮಾರ್ ಉಪಾಧ್ಯಾಯ (ದಿ।ಸೀತಾರಾಮ ಉಪಾಧ್ಯಾಯರ ಮಗ) ಹಾಗೂ ಜಯಲಕ್ಷ್ಮಿದಂಪತಿಗಳು ತಾ18-11-2015ರಂದು ತಮ್ಮ ನೂತನ ಗೃಹ ‘ಸಾರ್ಥಕ’ದ ಗೃಹಪ್ರವೇಶ ಸಮಾರಂಭವನ್ನು ನೆರವೇರಿಸಿದರು.

★★★★ ★★★★

ಕುಕ್ಕಿಕಟ್ಟೆಯ ಕಲ್ಯಾಣನಗರದಲ್ಲಿ ಶ್ರೀ ಕೆ.ಜಿ ಅನಂತ (ಶ್ರೀ ಕೆ.ವಿ.ಗಣೇಶಯ್ಯನವರ ಮಗ ಹಾಗೂ ಶ್ರೀಮತಿ ಉಷಾ ದಂಪತಿಗಳು ತಾ.18-11-2015ರಂದು ತಮ್ಮ ನೂತನಗೃಹ ‘ಅನುಗ್ರಹ’ದ ಗೃಹಪ್ರವೇಶ ಸಮಾರಂಭವನ್ನು ನೆರವೇರಿಸಿದರು.

## ಹರಿಕಥೆ

ಶ್ರೀಮಾನ್ ಪೆರಣಂಕಿಲ ರಂಗನಾಥ ರಾವ್ (ದಿವಂಗತ ಪೆರಣಂಕಿಲ ವಾಸುದೇವ ರಾವ್ ಹಾಗೂ ದಿವಂಗತಿ ಪಿ.ಸೀತಮ್ಮನವರ ಪುತ್ರ) ನಿವೃತ್ತ ಕಾರ್ಪೊರೇಶನ್ ಬ್ಯಾಂಕ್ ಅಧಿಕಾರಿ ಇವರ ಬೆಂಗಳೂರು ನಿವಾಸದಲ್ಲಿ ದಿನಾಂಕ 16-10-2015ನೇ (ನವರಾತ್ರಿ) ಶುಕ್ರವಾರ ಬೆಳಿಗ್ಗೆ ಗಣಹೋಮ, ಮಧ್ಯಾಹ್ನ ಸತ್ಯನಾರಾಯಣ ಪೂಜೆ ಹಾಗೂ ರಾತ್ರಿ ದುರ್ಗಾ ನಮಸ್ಕಾರ ಪೂಜೆಗಳನ್ನು ವೇದಮೂರ್ತಿ ಜಗದೀಶ ಭಟ್, ಪುತ್ತೂರು ಇವರ ನೇತೃತ್ವದಲ್ಲಿ ಬಹಳ ವಿಜ್ರಂಭಣೆಯಿಂದ ನೆರವೇರಿಸಲಾಯಿತು.

ಅದೇ ದಿನ ರಾತ್ರಿ ಕುಮಾರಿ ಶಾರ್ವರಿ ಎಂಬ ಬಾಲೆಯಿಂದ ‘ಅಷ್ಟವೈಭವಲಕ್ಷ್ಮೀ’ ಹರಿಕಥಾ ಕಾಲಕ್ಷೇಪ ಜರುಗಿತು. ಆ ಬಾಲೆಗೆ ಶ್ರೀಮತಿ ಸರೋಜ, ರಂಗಾನಾಥ ರಾಯರ ಧರ್ಮಪತ್ನಿ ಹೂ ಮಾಲಾರ್ಪಣೆ ಮಾಡಿ ಸ್ವಾಗತಿಸಿದರು. ಶ್ರೀಮಾನ್ ಜನಾರ್ದನ ಶಾಸ್ತ್ರಿ ನಂದಳಿಕೆ (ಎಚ್.ಎ.ಎಲ್ ಬೆಂಗಳೂರಿನಲ್ಲಿರುವ ನಮ್ಮ ಮನೆ ಕ್ಯಾಟರರ್ಸ್), ಯಕ್ಷಗಾನ ಕಲಾವಿದ ಅವರಿಂದ ಆ ಬಾಲೆಗೆ ಗೌರವ ಕಾಣಿಕೆಯನ್ನು ಕೊಟ್ಟು ಸತ್ಕರಿಸಲಾಯಿತು ಈ ಎಲ್ಲಾ ಕಾರ್ಯಕ್ರಮಗಳಿಗೆ ಬಂಧು ಬಳಗ ಹಿತೈಷಿಗಳು, ಹಾಗೂ ಮಿತ್ರರು ಆಗಮಿಸಿ ಪರಮಾತ್ಮನ ಕೃಪೆಗೆ ಪಾತ್ರರಾದರು.

## ನಿಧನ

### ಹರಿದಾಸ ರಾಯರು

ಕುಕ್ಕಿಕಟ್ಟೆ ಕಲ್ಯಾಣ ನಗರದ ನಿವಾಸಿ ನಿವೃತ್ತ ಶಿಕ್ಷಕ ಶ್ರೀ ಎನ್. ಹರಿದಾಸರಾಯರು ತಾ.25-11-2015ರಂದು ಸ್ವಗೃಹದಲ್ಲಿ ನಿಧನರಾದರು. ಇವರು ಪತ್ನಿ ಮತ್ತು ಪುತ್ರರಾದ ಉಮೇಶ ರಾವ್, ನವೀನ್ ಕುಮಾರ್, ಪ್ರವೀಣ್ ಕುಮಾರ್ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.


## ಶುಭ ಜನನ

ಶ್ರೀಮತಿ ಶಾಲಿನಿ ಹಾಗೂ ಕುಂಜಾರು ನಿರಂಜನರಾವ್ ಇವರ ಪುತ್ರ ಬೆಂಗಳೂರಿನಲ್ಲಿ ವಾಸ್ತವ್ಯವಿರುವ ಶ್ರೀ ಚೇತನ್‌ರಾವ್ ಹಾಗೂ ಶ್ರೀಮತಿ ಸಹನಾ ದಂಪತಿಗಳಿಗೆ ತಾ. 09-11-2015ರಂದು ಗಂಡು ಮಗುವಿನ ಜನನ.


**ಶ್ರೀ ಮಾತಾ ಜ್ಯೋತಿಷ್ಯಾಲಯ**
ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಕೆರೆ, ಬಾರ್ಕೂರು.
ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.
**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

**Buying and selling shares as easy as checking your emails**
Sharekhan Online Trading Account Features:
⇨ Your bank account gets directly linked to trading account
⇨ Can do direct fund transfer from any of 11 leading banks
⇨ Choose your trading account, Classic, FastTrade, TradeTiger
⇨ Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

**ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ**
ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.
**ವೇದಮೂರ್ತಿ ಚಿದಾನಂದ ಭಟ್**
#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010
ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
**ಮೊಬೈಲ್– 9886629697, 9986119865**

ಪ್ರೊ : ಸುಧಾಕರ್ ರಾವ್ ಬೆಳ್ಳೆ

**ಶ್ರೀಮಾತಾ ಇಲೆಕ್ಟ್ರಾನಿಕ್ಸ್**
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## ಮಹಾಪೋಷಕರಾಗಿ ಶ್ರೀ ಎಲ್ಲೂರು ಉಮೇಶರಾಯರು



ನಮ್ಮ ಸಮಾಜದ ಹಿರಿಯ ಗಣ್ಯವ್ಯಕ್ತಿ, ಕರ್ನಾಟಕ ಸರಕಾರಕ್ಕೆ ಪಿ.ಡಬ್ಲ್ಯೂ.ಡಿ ಇಲಾಖೆಯ ಕಾರ್ಯದರ್ಶಿಯಾಗಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರೂ ಇನ್ನೂ ಕರ್ನಾಟಕ ಸರಕಾರಕ್ಕೆ ಅನೇಕ ವಿಷಯಗಳಲ್ಲಿ ಸಲಹೆಗಾರರಾಗಿ ಸಹಾಯ ಹಸ್ತ ನೀಡುತ್ತಿರುವ ಶ್ರೀ ಎಲ್ಲೂರು ಉಮೇಶರಾಯರು ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ನಮ್ಮ ವೇದಿಕೆಯ ಗೌರವವನ್ನು ಹೆಚ್ಚಿಸಿದ್ದಾರೆ. ಇವರು ಎಲ್ಲೂರು ಜೋಯಿಸರೆಂದೇ ಪ್ರಖ್ಯಾತರಾದ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕ ಹಾಗೂ ಗಿರಿಜಮ್ಮ ದಂಪತಿಗಳ ನಾಲ್ಕನೆ ಪುತ್ರ. ಕುಗ್ರಾಮದಲ್ಲಿ ಜನಿಸಿ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದ ಮೇಧಾವಿ.

1958ನೇ ಇಸವಿಯಲ್ಲಿ ಕರ್ನಾಟಕ ಸರಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಸೇವೆಗೆ ಸೇರಿದ ಅವರು ಹಂತ ಹಂತವಾಗಿ ಮೇಲೇರಿ 1993ರಲ್ಲಿ ಇಲಾಖೆಯ ಅತ್ಯುನ್ನತ ಹುದ್ದೆಯಿಂದ ನಿವೃತ್ತರಾದರು. ತಮ್ಮ ಬುದ್ಧಿವಂತ್ತೆ ಹಾಗೂ ಕಾರ್ಯದಕ್ಷತೆಗಳಿಂದ ಅನೇಕ ಸಂದಿಗ್ದ ಸಂದರ್ಭಗಳನ್ನು ಯಶಸ್ವಿಯಾಗಿ ನಿಭಾಯಿಸಿದ ಅವರ ಕೌಶಲ್ಯವೇ ಅವರನ್ನು ಉನ್ನತ ಹುದ್ದೆಗೆ ಒಯ್ಯಿತು ಎಂದರೆ ಅತಿಶಯೋಕ್ತಿಯಲ್ಲ .

ಸುರತ್ಕಲ್ಲಿನ ಇಂಜಿನಿಯರಿಂಗ್ ಕಾಲೇಜಿನ ಕಟ್ಟಡಗಳ ವಿನ್ಯಾಸ, ಹಿಡ್ಕಲ್ ಅಣೆಕಟ್ಟಿನ ವಿನ್ಯಾಸ, ಮಲಪ್ರಭಾ ಎಡದಂಡೆ ಕಾಲುವೆ, ಘಟಪ್ರಭಾಯೋಜನೆಯ ಮೂರನೆ ಹಂತ, ಕೃಷ್ಣಾ ಮೇಲ್ದಂಡೆ ಯೋಜನೆ, ಅಲಮಟ್ಟಿ ಹಾಗೂ ನಾರಾಯಣ ಪುರ ಅಣೆಕಟ್ಟುಗಳು ಹಾಗೂ ಎಲ್ಲಕ್ಕೂ ಮುಖ್ಯವಾಗಿ ಇಲಾಖೆಯ ಗುಣಮಟ್ಟ ನಿಯಂತ್ರಣದ ಬಗ್ಗೆ ಕೈಪಿಡಿಯ ರಚನೆ ಇವೆಲ್ಲದರಲ್ಲೂ ತಾವು ಮುಂದಾಳುತ್ವ ವಹಿಸಿ ಯಶಸ್ವಿಯಾಗಿದ್ದಾರೆ. 1992ರಲ್ಲಿ ಭದ್ರಾ ಜಲಾಶಯದ ಕಾಲುವೆ ಒಡೆದಾಗ ಅದನ್ನು ನಿಭಾಯಿಸಿದ ಜಾಣ್ಮೆ ಹಾಗೂ ಗುಲ್ಬರ್ಗಾದ ತುಂಬಿದ ಭೋಸ್ಲಾ ಅಣೆಕಟ್ಟು ಕುಸಿದು ಜನರೆಲ್ಲಾ ಕಂಗೆಟ್ಟಿದ್ದಾಗ ಅಹೋರಾತ್ರಿ ಸ್ಥಳದಲ್ಲಿದ್ದು ಯಶಸ್ವಿಯಾಗಿ ಅನಾಹುತವನ್ನು ತಡೆಗಟ್ಟಿದ ಅವರನ್ನು ರಾಜ್ಯದ ಆಡಳಿತ ಗಾರರು ಹಾಗೂ ಹಿರಿಯ, ಕಿರಿಯ ಅಭಿಯಂತರರು ಈಗಲೂ ನೆನಪಿಸಿ ಕೊಳ್ಳುತ್ತಾರೆ.

ಇವರ ಪತ್ನಿ ಶ್ರೀಮತಿ ಕಸ್ತೂರಿಯವರು ಪೊಳಲಿ ನಟ್ಟೋಜಿ ಕೃಷ್ಣಯ್ಯರವರ ಪುತ್ರಿ. ಇವರ ಮೊದಲ ಪುತ್ರಿ ಗೀತಾರವರ ಪತಿ ಡಾ। ರಾಧಾಕೃಷ್ಣರವರು ರಕ್ಷಣಾ ಇಲಾಖೆಯ ಅಧೀನದಲ್ಲಿ ವಿಜ್ಞಾನಿಯಾಗಿ ಪುರಸ್ಕೃತರಾದವರು. ಇನ್ನೊಬ್ಬ ಮಗಳು ಉಷಾ ಇಸ್ರೋದಲ್ಲಿ ವಿಜ್ಞಾನಿ ಹಾಗೂ ಅವರ ಪತಿ ಶ್ರೀ ದಿನೇಶ್ ಶಾಸ್ತ್ರಿ ಸ್ವಂತ ಆರ್ಥಿಕ ಸಂಸ್ಥೆಯೊಂದರ ಸ್ಥಾಪಕ. ಡಾ। ಜಯಶ್ರೀ ತಜ್ಞವೈದ್ಯರಾಗಿ ಬೆಂಗಳೂರಿನಲ್ಲಿ ನೆಲೆಸಿರುವ ಇನ್ನೊಬ್ಬ ಮಗಳು. ಇವರ ಪತಿ ಶ್ರೀ ಶಶಿಧರ್ ಧಾರೇಶ್ವರ್ ಎ.ಬಿ.ಬಿ. ಇಂಡಿಯಾ ಸಂಸ್ಥೆಯ ಉಪಾಧ್ಯಕ್ಷರು. ಮತ್ತೊಬ್ಬ ಮಗಳು ರಾಜೇಶ್ವರಿ ಅಮೇರಿಕಾದಲ್ಲಿ ಇಂಜಿನಿಯರ್ ಹಾಗೂ ಅವರ ಪತಿ ಶ್ರೀ ನಂದಕಿಶೋರ್ ರಾವ್ ಸಹಾ ಆರ್ಥಿಕ ಸಂಸ್ಥೆಯೊಂದರಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಕೊನೆಯ ಪುತ್ರಿ ಅನುಪಮಾ ಇಂಜಿನಿಯರ್ ಹಾಗೂ ಅವರ ಪತಿ ಡಾ। ನಟೇಶ ರಾವ್ ಭಾರತೀಯ ನೌಕಾದಳದಲ್ಲಿ ಸೇವೆ ಸಲ್ಲಿಸಿದವರು. ಮಗ ಸುಧೀರ್ ಅಮೇರಿಕಾದಲ್ಲಿ ನೆಲೆಸಿರುವ ಇಂಜಿನಿಯರ್ ಹಾಗೂ ಅವರ ಪತ್ನಿ ಸುಮಾ ಸಹಾ ಇಂಜಿನಿಯರ್ ಆಗಿದ್ದಾರೆ. ಹೀಗೆ ಉಮೇಶ್ ರಾಯರು ತಾವೂ ಸ್ವತಃ ಪ್ರತಿಭಾವಂತರಲ್ಲದೇ ಇಡೀ ಕುಟುಂಬವನ್ನೆ ಪ್ರತಿಭಾನ್ವಿತರನ್ನಾಗಿ ಪಡೆದ ಅದೃಷಶಾಲಿ.

ಶ್ರೀ ಉಮೇಶ ರಾಯರು ಮೈಸೂರಿನ ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರಿನ ಶತಮಾನೋತ್ಸವದ ಸಂದರ್ಭದಲ್ಲಿ ಹಾಗೂ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮ್ಮೇಳನ ಉಡುಪಿಯಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. ಅನೇಕ ಸಂಘ-ಸಂಸ್ಥೆಗಳೂ ಇವರನ್ನು ಸನ್ಮಾನಿಸಿದೆ.

ಇದೇ ತಿಂಗಳಲ್ಲಿ ಎಂಬತ್ತನೆ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ನಮ್ಮ ಸಮಾಜದ ಈ ವಿಶ್ವೇಶ್ವರಯ್ಯನಿಗೆ ಶ್ರೀ ಶಾರದಾ ಪತ್ರಿಕೆಯು ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ಪುಣ್ಯಸ್ಮರಣೆ



ಜನನ : 04-02-1946

ನಿಧನ : 20-12-2007

**ಶ್ರೀಮತಿ ಕುಸುಮ ಗೋವಿಂದ ರಾವ್, ಕರಾಡ**

**(ಪುಣ್ಯತಿಥಿ ಧನುರ್ಮಾಸ ಶುಕ್ಲ ಪಕ್ಷದ ಏಕಾದಶಿ : 21-12-2015)**

ನೀವು ನಮ್ಮನ್ನಗಲಿ 8 ವರ್ಷ ಕಳೆದರೂ ನಿಮ್ಮ ನೆನಪು ಹಸಿರಾಗಿದ್ದು ನಿಮ್ಮ ಆದರ್ಶ, ಸದ್ಗುಣ ಸಂಪನ್ನತೆಯೇ ನಮಗೆ ದಾರಿದೀಪ. ನಿಮ್ಮನ್ನು ನಿರಂತರವೂ ಸ್ಮರಿಸುತ್ತಿರುವ,

**ವೈ. ಗೋವಿಂದ ರಾವ್ (ಪತಿ); ಮಕ್ಕಳು-ವೈ.ನಾಗರಾಜ ರಾವ್ ಮತ್ತು ಶ್ರೀಮತಿ ಸುಮಂಗಲ ಎನ್.ರಾವ್; ವೈ.ಕೃಷ್ಣರಾಜ ರಾವ್ ಮತ್ತು ಶ್ರೀಮತಿ ಗಾಯತ್ರಿ ಕೆ. ರಾವ್; ಶ್ರೀಮತಿ ಹೇಮಲತಾ ಮತ್ತು ರಾಜೇಂದ್ರ ಕುಮಾರ್ ಹಾಗೂ ಋತುಜಾ; ಹೃಷಿಕೇಶ್; ರಕ್ಷಾ; ರಕ್ಷಿತ್; ನಮ್ರತಾ; ಅನ್ವಿತಾ (ಮೊಮ್ಮಕ್ಕಳು)**

## 80ನೇ ಹುಟ್ಟುಹಬ್ಬದ ಶುಭಾಶಯಗಳು



**ಶ್ರೀ ಎಲ್ಲೂರು ಉಮೇಶ ರಾವ್ ಹಾಗೂ ಶ್ರೀಮತಿ ಕಸ್ತೂರಿ**

ಶುಭಾಶಯಗಳೊಂದಿಗೆ ನಿಮ್ಮ ಆಶೀರ್ವಾದ ಕೋರುವ,

ಶ್ರೀಮತಿ ಗೀತಾ ಹಾಗೂ ಡಾ। ರಾಧಾಕೃಷ್ಣ ರಾವ್
ಶ್ರೀಮತಿ ಉಷಾ ಶಾಸ್ತ್ರಿ ಹಾಗೂ ಶ್ರೀ ದಿನೇಶ್ ಶಾಸ್ತ್ರಿ
ಡಾ। ಜಯಶ್ರೀ ಹಾಗೂ ಶ್ರೀ ಶಶಿಧರ್ ಧಾರೇಶ್ವರ್
ಶ್ರೀಮತಿ ರಾಜೇಶ್ವರಿ ಹಾಗೂ ಶ್ರೀ ನಂದಕಿಶೋರ್ ರಾವ್
ಶ್ರೀಮತಿ ಅನುಪಮ ಹಾಗೂ ಡಾ। ನಟೇಶ್ ರಾವ್
ಶ್ರೀ ಸುಧೀರ್ ರಾವ್ ಹಾಗೂ ಶ್ರೀಮತಿ ಸುಮಾ ಹಾಗೂ ಮೊಮ್ಮಕ್ಕಳು
ಶ್ರೀ ಪೊಳಲಿ ನಟ್ಟೋಜಿ ಲಕ್ಷ್ಮೀನಾರಾಯಣ ರಾವ್
ಸಹೋದರ-ಸಹೋದರಿಯರು ಹಾಗೂ ಮೊಮ್ಮಕ್ಕಳು
ಮತ್ತು ಬಂಧುಬಾಂಧವರು

## ಹಾರ್ದಿಕ ಶುಭಾಶಯಗಳು



**ಎವರೆಸ್ಟ್ ವೀರ ಶ್ರೀ ಪಿ. ಎನ್. ಗಣೇಶ್**

ಪೋಲೀಸ್ ಇನ್ಸ್‌ಪೆಕ್ಟರ್ ಆಗಿ ಪದೋನ್ನತಿ ಹೊಂದಿ ಗಣಿ ಅಪರಾಧ ಪತ್ತೆಗಾಗಿ ಲೋಕಾಯುಕ್ತ ಸ್ಪೆಷಲ್ ಇನ್‌ವೆಸ್ಟಿಗೇಷನ್ ಟೀಮ್‌ಗೆ ವಿಶೇಷ ಅಧಿಕಾರಿಯಾಗಿ ನಿಯೋಜನೆಗೊಂಡ ನಿಮಗೆ ಹಾರ್ದಿಕ ಶುಭಾಶಯ ಕೋರುವ,

| | |
|---|---|
| ಶ್ರೀಮತಿ ವನಿತಾ ರಾವ್ ನಂದಳಿಕೆ | ಶ್ರೀಮತಿ ಮತ್ತು ಶ್ರೀ ಪ್ರಶಾಂತ ರಾವ್, ನಂದಳಿಕೆ |
| ಶ್ರೀಮತಿ ವಸಂತಿ ಹೆಚ್. ನಂದಳಿಕೆ | ಶ್ರೀಮತಿ ಮತ್ತು ಶ್ರೀ ಪ್ರಸಾದ್ ರಾವ್ ನಂದಳಿಕೆ |
| ಶ್ರೀಮತಿ ಮತ್ತು ಶ್ರೀ ಪ್ರಭಾಕರ ರಾವ್, ನಂದಳಿಕೆ | ಶ್ರೀಮತಿ ವಸಂತಿ ರಾವ್ ಮತ್ತು ಮಕ್ಕಳು, ಕಾರ್ಕಳ |
| ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್, ನಂದಳಿಕೆ | ಶ್ರೀಮತಿ ಮತ್ತು ಶ್ರೀ ವಸಂತ್ ರಾವ್, ಕರಂಬಳ್ಳಿ |
| ಶ್ರೀಮತಿ ಮತ್ತು ಶ್ರೀ ಉಮೇಶ ರಾವ್, ನಂದಳಿಕೆ | ಶ್ರೀಮತಿ ಮತ್ತು ಶ್ರೀ ದಿನೇಶ್ ರಾವ್, ಬೈಲಕೆರೆ |
| ಶ್ರೀಮತಿ ಮತ್ತು ಶ್ರೀ ನವೀನ್ ಕುಮಾರ್, ನಂದಳಿಕೆ | ಶ್ರೀಮತಿ ಮತ್ತು ಶ್ರೀ ಹೆಚ್.ನಿರಂಜನ ರಾವ್, ಹೆರ್ಗ |
| ಶ್ರೀಮತಿ ಮತ್ತು ಶ್ರೀ ಪ್ರವೀಣ್ ಕುಮಾರ್, ನಂದಳಿಕೆ | ಶ್ರೀಮತಿ ಮತ್ತು ಶ್ರೀ ಎನ್.ಕೃಷ್ಣಾನಂದ ರಾವ್, ಉಂಡಾರು |
| ಶ್ರೀಮತಿ ಮತ್ತು ಶ್ರೀ ಜಯಪ್ರಕಾಶ್ ರಾವ್, ನಂದಳಿಕೆ | ಮತ್ತು ನಂದಳಿಕೆ ಮೂಡುಮನೆ ವಂಶವೃಕ್ಷ ಬಾಂಧವರು |

## ಪ್ರವಾಸ :

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ ಇದರ ಯುವ ಮತ್ತು ಕ್ರೀಡಾ ವೇದಿಕೆಯ ವತಿಯಿಂದ ತಾ.31-01-2016ರ ರವಿವಾರದಂದು ವಾರಾಹಿ ಹಾಗೂ ಕಮಲಶಿಲೆಗೆ ಪ್ರವಾಸವನ್ನು ಆಯೋಜಿಸಲಾಗಿದೆ. ಬೆಳಿಗ್ಗೆ 7 ಗಂಟೆಗೆ ಶ್ರೀಶಾರದಾ ಮಂಟಪದಿಂದ ಹೊರಟು ಸಾಯಂಕಾಲ ವಾಪಾಸು ಬರಲಾಗುವುದು. ಪ್ರವಾಸ ಶುಲ್ಕ ತಲಾ ರೂ.350/-.

ತಮ್ಮ ಹೆಸರುಗಳನ್ನು ತಾ.15-01-2016ರ ಮೊದಲು ಶ್ರೀಶಾರದಾ ಮಂಟಪದ ಮೆನೇಜರ್ ಶ್ರೀ ಅಜಿತ್ (0820-2520754), ಯುವ ವೇದಿಕೆಯ ಅಧ್ಯಕ್ಷ ಶ್ರೀ ಕೃಷ್ಣರಾಜ್ (9164581333) ಅಥವಾ ಸಂಚಾಲಕ ಶ್ರೀ ವಸಂತರಾವ್ ಕರಂಬಳ್ಳಿ (9632291183) ಇವರಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದೀಪಾವಳಿ ಸಂಭ್ರಮ ಮತ್ತು ಸನ್ಮಾನ




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ದೀಪಾವಳಿ ಸಂಭ್ರಮ'ವನ್ನು ಸಾಂಪ್ರದಾಯಿಕ ಹಾಗೂ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಮೊದಲಾಗಿ ಶ್ರೀ ಸಭಾದ ಪದಾಧಿಕಾರಿಗಳು, ಮಹಿಳಾ ಮತ್ತು ಯುವ ವೇದಿಕೆಯ ಸದಸ್ಯರು ದೀಪ ಪ್ರಜ್ವಲನದ ಮೂಲಕ ಕಾರ್ಯಕ್ರಮದ ಶುಭಾರಂಭಗೈದರು. ಕು| ವೈಭವಲಕ್ಷ್ಮೀ ಮತ್ತು ಕು| ಐಶ್ವರ್ಯಲಕ್ಷ್ಮೀರವರ ಪ್ರಾರ್ಥನೆಯ ನಂತರ ವಿವಿಧ ವಿನೋದಾತ್ಮಕ ಆಟಗಳನ್ನು ನಡೆಸಲಾಯಿತು. ಲಯನ್ಸ್ ಸಂಸ್ಥೆಯ ಉನ್ನತ ಹುದ್ದೆಯಾದ ಜಿಲ್ಲಾ ರಾಜ್ಯಪಾಲರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಕವಿತಾ ಶಾಸ್ತ್ರಿ ಹಾಗೂ ಪತಿ ಡಾ|ಸಂತೋಷ ಕುಮಾರ್ ಶಾಸ್ತ್ರಿಯವರನ್ನು ಶ್ರೀ ಸಭಾದ ಪ್ರಮುಖರು ಸೇರಿ ಸನ್ಮಾನಿಸಿದರು. ಸನ್ಮಾನಕ್ಕೆ ಉತ್ತರಿಸಿದ ಶ್ರೀಮತಿ ಕವಿತಾ ಶಾಸ್ತ್ರಿಯವರು "ಹಲವಾರು ಸನ್ಮಾನಗಳನ್ನು ಸ್ವೀಕರಿಸಿರುವ ನನಗೆ ಶ್ರೀ ಸಭಾದ ಸನ್ಮಾನವು ವಿಶೇಷ ಸಂತೋಷವನ್ನು ತಂದಿದೆ. ಕುಟುಂಬದವರೊಡನೆ ಸಂಭ್ರಮಿಸುವ ಕ್ಷಣಗಳು ಯಾವತ್ತೂ ಸ್ಮರಣೀಯ. ಅಂತಹ ಸಂದರ್ಭವನ್ನು ಒದಗಿಸಿದ ಸಮಾಜದ ಸರ್ವರಿಗೂ ವಂದನೆ" ಎಂದು ತಿಳಿಸಿದರು. ನಂತರ ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ಸುಡುಮದ್ದು ಪ್ರದರ್ಶನ, ದಾಂಡಿಯಾ ನೃತ್ಯಗಳು, ಶ್ರೀ ಸಭಾದ ಸದಸ್ಯರೇ ತಯಾರಿಸಿದ ಖಾದ್ಯದೊಡಗಿನ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಶ್ರೀ ಸಭಾದ ಡಾ. ಎ.ಪಿ. ಕೃಷ್ಣ, ಶ್ರೀ ಕರುಣ ರಾವ್ ಬೆಳ್ಳೆ, ಶ್ರೀ ಚೇತನ್ ಶರ್ಮ, ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಅರುಣಾ ಸೋಮಶೇಖರ್ ಕಾರ್ಯಕ್ರಮ ಸಂಘಟಿಸಿದರು. ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀ ನಾಗರಾಜ್ ಶರ್ಮ, ಶ್ರೀ ಸುರೇಶ ಕಡಬ, ವಿನೋದಾತ್ಮಕ ಆಟಗಳನ್ನು ಸಂಯೋಜಿಸಿದರು. ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಶ್ರೀಮತಿ ಸುಮಂಗಲ ಪ್ರಭಾಕರ್ ಹಾಗೂ ಶ್ರೀಮತಿ ಮಂಜುಳ ಮುರಲೀಧರ್ ತೀರ್ಪುಗಾರರಾಗಿ ಸಹಕರಿಸಿದರು.

# " ಕಾರ್ಕಳ ಕೆ. ರತ್ನಾಕರರಾವ್ ಆಡಳಿತ ಮೊಕ್ತೇಸರರಾಗಿ ಆಯ್ಕೆ"



ಶ್ರೀಯುತ ಕೊಕ್ರಾಡಿ ರತ್ನಾಕರರಾಯರು ತಾ.1-11-2015 ರಂದು ಶ್ರೀ ಅನಂತಪದ್ಮನಾಭ ದೇವಸ್ಥಾನ, ಅನಂತಶಯನ ಕಾರ್ಕಳ ಇದರ ಆಡಳಿತ ಮೊಕ್ತೇಸರರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಕಳೆದ ಒಂಬತ್ತು ವರ್ಷಗಳಿಂದ ಶ್ರೀ ಅನಂತಪದ್ಮನಾಭ ಕ್ರೆಡಿಟ್ ಕೋಪರೇಟಿವ್‌ಸೊಸೈಟಿ (ರಿ) ಹೆಬ್ರಿ, ಕಾರ್ಕಳ ಇದರ ನಿರ್ದೇಶಕರಾಗಿರುವ ಇವರು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ) ಇದರ ಕಾರ್ಕಳ ಶಾಖೆಯ ಅಧ್ಯಕ್ಷರಾಗಿದ್ದಾರೆ. ಶ್ರೀ ಶಂಕರ ಪ್ರತಿಷ್ಠಾನ (ರಿ) ಕಾರ್ಕಳ ಇದರ ಕಾರ್ಯದರ್ಶಿಯಾಗಿ, ಶ್ರೀ ಶಂಕರ ಸೇವಾಸಮಿತಿ, ಕಾರ್ಕಳ ಇದರ ಕೋಶಾಧಿಕಾರಿಯಾಗಿ ಪ್ರಸ್ತುತ ಸೇವೆ ಸಲ್ಲಿಸುತ್ತಿದ್ದಾರೆ. ಕಾರ್ಕಳ ತಾಲೂಕು ಬ್ರಾಹ್ಮಣ ಸಂಘ (ರಿ) ಇದರಲ್ಲಿ ಪ್ರಾರಂಭದಿಂದಲೂ ಸದಸ್ಯರಾಗಿದ್ದು, ಆರು ವರ್ಷ ಕೋಶಾಧಿಕಾರಿಯಾಗಿ, ಹತ್ತು ವರ್ಷ ಕಾರ್ಯದರ್ಶಿಯಾಗಿ, ನಾಲ್ಕು ವರ್ಷ ಉಪಾಧ್ಯಕ್ಷರಾಗಿ ಪ್ರಸ್ತುತ ಕಾರ್ಯಾಧ್ಯಕ್ಷರಾಗಿ ಕಳೆದ ಐದು ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಕೊಕ್ರಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಮೊಕ್ತೇಸರರಾಗಿ, ಬ್ರಹ್ಮ ಕಲಶದ ಸಮಯದಲ್ಲಿ ಕಾರ್ಯದರ್ಶಿಯಾಗಿಯೂ ಕೆಲಸ ನಿರ್ವಹಿಸಿರುತ್ತಾರೆ. ಭುವನೇಂದ್ರ ಕಾಲೇಜಿನಲ್ಲಿ ಸುಮಾರು 33 ವರುಷ ಗುಮಾಸ್ತರಾಗಿ ಸೇವೆ ಸಲ್ಲಿಸಿ 2012ರಲ್ಲಿ ನಿವೃತ್ತಿ ಹೊಂದಿ ತಮ್ಮ ನಿವೃತ್ತ ಜೀವನವನ್ನು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಕೊಕ್ರಾಡಿ ನಾರಾಯಣರಾವ್-ಲಕ್ಷ್ಮೀ ದಂಪತಿಗಳ ಪುತ್ರರಾದ ಇವರಿಗೆ ಭಗವಂತನು ಇನ್ನೂ ಹೆಚ್ಚಿನ ಸಮಾಜಸೇವೆ ಮಾಡಲು ಆಯುಷ್ಯ, ಆರೋಗ್ಯ ಭಾಗ್ಯ ನೀಡಲೆಂದು ನಮ್ಮೆಲ್ಲರ ಹಾರೈಕೆ.

**- ಶ್ರೀ ದೇವಾನಂದ ಭಟ್, ಬೆಳುವಾಯಿ**

# ಶ್ರೀ ಕ್ಷೇತ್ರ ಉದಯಾದ್ರಿಯಲ್ಲಿ ಶ್ರೀ ಚಂಡಿಕಾಯಾಗ ಸಂಪನ್ನ



ಪಡುಬಿದ್ರೆಯ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಶ್ರೀ ಜಗದ್ಗುರು ಭಾರತೀತೀರ್ಥ ಮಹಾಸ್ವಾಮಿಗಳ ಪೂರ್ಣಾನುಗ್ರಹದೊಂದಿಗೆ ಶ್ರೀ ಶರನ್ನವರಾತ್ರಿ ಉತ್ಸವದ ದುರ್ಗಾಷ್ಟಮಿಯ ದಿನ 21-10-2015ರ ಬುಧವಾರದಂದು ಶ್ರೀ ಚಂಡಿಕಾಯಾಗವು ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳಿಂದ ಸಂಪನ್ನಗೊಂಡಿತು. ಪ್ರತಿ ವರ್ಷ ನವರಾತ್ರಿಯ ದುರ್ಗಾಷ್ಟಮಿಯಂದು ಸಂಪ್ರದಾಯದಂತೆ ಶ್ರೀ ಕ್ಷೇತ್ರದಲ್ಲಿ ಶ್ರೀ ಚಂಡಿಕಾಯಾಗವು ಜರುಗುತ್ತಿದ್ದು, ಈ ವರುಷವೂ ಯಾಗವು ಬಹಳ ವಿಜೃಂಭಣೆಯಿಂದ ಸಂಪನ್ನಗೊಂಡಿತು. ಶ್ರೀ ದೇವರ ಊರ ಪರ-ಊರ ನೂರಾರು ಭಕ್ತರುಗಳು ಮತ್ತು ಸಮಾಜ ಬಾಂಧವರೆಲ್ಲರೂ ಈ ಯಾಗದಲ್ಲಿ ಉಪಸ್ಥಿತರಿದ್ದು ಶ್ರೀದೇವರ ಪೂರ್ಣಾನುಗ್ರಹವನ್ನು ಪಡೆದುಕೊಂಡರು. ತದನಂತರ ನೆರೆದ ಎಲ್ಲಾ ಭಕ್ತರಿಗೂ ಅನ್ನಸಂತರ್ಪಣೆ ನೆರವೇರಿತು.



# ವೈ. ಮೋಹನ ರಾವ್ ರಚಿಸಿದ ''ನಗೆಯು ಬರುತಿದೆ ಎನಗೆ'' ಪುಸ್ತಕ ಬಿಡುಗಡೆ



ಸಾಹಿತ್ಯದಲ್ಲಿ ವಿಡಂಬನಾತ್ಮಕ ಬರೆಹಗಳು ನಗುವಿನ ಅಲೆಗಳನ್ನು ಎಬ್ಬಿಸುತ್ತವೆ. ಅಂತಹ ಸಾಹಿತ್ಯ ಹೆಚ್ಚೆಚ್ಚು ಮಂದಿಗೆ ತಲುಪಿದಾಗ ನಗುನಗುತ್ತ ಬಾಳುವವರ ಸಂಖ್ಯೆ ವೃದಿ□ ಸಾಮಾಜಿಕ ಸ್ವಾಸ್ಥ್ಯಕ್ಕೆ ನಾಂದಿಯಾಗುತ್ತದೆ. ಆದರೆ ಹಾಸ್ಯ ಅಥವಾ ತಮಾಷೆ ಸದಭಿರುಚಿಯದ್ದಾಗಿರುವಂತೆ ನೋಡಿಕೊಳ್ಳುವುದು ಬಹಳ ಮುಖ್ಯ ಎಂದು ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷ ವೈ.ಭುವನೇಂದ್ರ ರಾವ್ ಅವರು ಹೇಳಿದರು.

ಅವರು ತಾ.22-11-2015ನೇ ರವಿವಾರ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಜ್ಞಾನಮಂದಿರದಲ್ಲಿ ವೈ ಮೋಹನ ರಾವ್ ಅವರ 'ನಗೆಯು ಬರುತಿದೆ ಎನಗೆ' ಎಂಬ ಹಾಸ್ಯ ಲೇಖನಗಳ ಸಂಕಲನವನ್ನು ಬಿಡುಗಡೆ ಮಾಡಿ ಮಾತನಾಡಿದರು.


ಈ ಸಂದರ್ಭದಲ್ಲಿ ಕಾಸರಗೋಡಿನ ಕತೆಗಾರ ದಿ|ವ್ಯಾಸರ ಬದುಕನ್ನು ಅವರ ಪುತ್ರ ತೇಜಸ್ವಿ.ಎಂ ವ್ಯಾಸ ಅವರು ಹೇಳಿದಂತೆ ಪುಸ್ತಕ ರೂಪದಲ್ಲಿ ನಿರೂಪಿಸಿದ ಅನುಪಮ ಪ್ರಸಾದ ಅವರು ಬರೆದ 'ಅರ್ಧಕಥಾನಕ' ಗ್ರಂಥದ ಪರಿಚಯವನ್ನು ಶ್ರೀ ಪೂರ್ಣಪ್ರಜ್ಞ ಪದವಿ ಕಾಲೇಜಿನ ಕನ್ನಡ ಉಪನ್ಯಾಸಕ ಅಶ್ವತ್ಥ ಭಾರದ್ವಾಜ್ ಕೆ. ಅವರು ಮಾಡಿಕೊಟ್ಟರು. ಅನುಪಮ ಪ್ರಸಾದ್ ಅನುಭವ ಹಂಚಿಕೊಂಡರು. ಹಾಸ್ಯ ಸಾಹಿತಿ ಕು.ಗೋ. ಶುಭ ಹಾರೈಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕಲಾ ವಿಮರ್ಶಕ ಎ. ಈಶ್ವರಯ್ಯ ಅವರು ಪರಿಶುದ□ ನಗುವಿನ ವಿವಿಧ ಮೂಲಗಳು ಮತ್ತು ಆಯಾಮಗಳ ಬಗ್ಗೆ ಮಾತನಾಡಿ ಬದುಕಿನಲ್ಲಿ ಹಾಸ್ಯಕ್ಕಿರುವ ಪ್ರಾಧಾನ್ಯವನ್ನು ಮನದಟ್ಟು ಮಾಡಿದರು.

ತೇಜಸ್ವಿ ಎಂ. ವ್ಯಾಸ ಉಪಸ್ಥಿತರಿದ್ದರು ನಿವೃತ್ತ ಜೀವವಿಮಾ ಅಧಿಕಾರಿ ಕೆ.ವಿ.ಶ್ರೀನಿವಾಸ ರಾವ್ ಅಧ್ಯಕ್ಷತೆ ವಹಿಸಿದ್ದರು. ವೈ ಮೋಹನ ರಾವ್ ಸ್ವಾಗತಿಸಿದರು. ದಿಶಾ ಪ್ರಾರ್ಥಿಸಿದರು. ರಾಮ ಭಟ್ಟ ಸಜಂಗದ್ದೆ ಕಾರ್ಯಕ್ರಮ ನಿರ್ವಹಿಸಿದರು.

'ನಗೆಯು ಬರುತಿದೆ ಎನಗೆ' ಶ್ರೀ ವೈ.ಮೋಹನರಾಯರ ನಾಲ್ಕನೇ ಕೃತಿಯಾಗಿದ್ದು, ಒಂಬತ್ತು ನಗೆ ಬರಹಗಳನ್ನು ಒಳಗೊಂಡಿದೆ. ಹಾಗೂ ಬ್ರಹ್ಮಗಿರಿ ಪ್ರಕಾಶನ ಇವರಿಂದ ಪ್ರಕಟಿಸಲ್ಪಟ್ಟಿದೆ..


# ಚಿಣ್ಣರ ಅಂಗಳ



ಬೆಳ್ಳೆ ಸದಾಶಿವ ರಾವ್ ಮತ್ತು ಶ್ರೀಮತಿ ಸಹನಾ ಎಸ್. ರಾವ್ ದಂಪತಿಗಳ ಪುತ್ರಿ ಕು. ಸಾಗರಿಕಾ ಎಸ್ ರಾವ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಉಡುಪಿ ಜಿಲ್ಲೆ ಮತ್ತು ಶ್ರೀ ರವಿಶಂಕರ ವಿದ್ಯಾಮಂದಿರ ಕಾಬೆಟ್ಟು ಇವರ ಸಹಯೋಗದಲ್ಲಿ ನಡೆದ "ಚಿಗುರು" ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸುಗಮ ಸಂಗೀತ ಕಛೇರಿ ನಡೆಸಿಕೊಟ್ಟರು. ಇವರಿಗೆ ಕೀಬೋರ್ಡ್‌ನಲ್ಲಿ ಪ್ರಕಾಶ್ ರಾವ್ ಹಾಗೂ ತಬಲಾದಲ್ಲಿ ಗುರುದತ್ ಶೆಣೈ ಸಹಕಾರ ನೀಡಿದರು. ಇವರು ವಿದ್ಯೇಶ ವಿದ್ಯಾಮಾನ್ಯ ನಾಶನಲ್ ಆಂಗ್ಲ ಮಾಧ್ಯಮ ಶಾಲೆಯ ೭ ನೇ ತರಗತಿ ವಿದ್ಯಾರ್ಥಿನಿ.



'ಉದಯವಾಣಿ.ಕಾಮ್'ನಲ್ಲಿ ಮಕ್ಕಳದಿನಾಚರಣೆಯ ಅಂಗವಾಗಿ ನಡೆದ ಮಕ್ಕಳ ಫೋಟೋ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿದ ಬೇಬಿ ಪಾವನಿ ರಾವ್. ಮುಂಬಯಿನ ಚೆಂಡುಕಳ ಪಲ್ಲವಿ ರಾವ್ ಹಾಗೂ ಅಶ್ವಿನ್ ರಾವ್ ದಂಪತಿಗಳ ಪುತ್ರಿ.





ಅನನ್ಯ ಕೆ. ರಾವ್
2ನೇ ತರಗತಿ,
ಲಾರ್ಡ್ಸ್ ಸೆಂಟ್ರಲ್ ಸ್ಕೂಲ್,
ಮಂಗಳೂರು

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org